2019 ಕ.ತೀ.ವ 347

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಪಿ.ಎಸ್. ದಿನೇಶ್ ಕುಮಾರ್

## ರೇವಣ್ಣ ಮತ್ತು ಇತರರು –ವಿರುದ್ಧ– ಕರ್ನಾಟಕ ರಾಜ್ಯ (ಶಿವಮೊಗ್ಗ ಗ್ರಾಮಾಂತರ ಪೊಲೀಸ್ ಠಾಣೆ)*

ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 401ನೇ ಪ್ರಕರಣದೊಂದಿಗೆ ಓದಿಕೊಳ್ಳಲಾದ ಭಾರತ ದಂಡ ಸಂಹಿತೆ 397ನೇ ಪ್ರಕರಣದ ಮೇರೆಗೆ ಸಲ್ಲಿಸಲಾದ ಕ್ರಿಮಿನಲ್ ಪುನರೀಕ್ಷಣಾ ಅರ್ಜಿ.

ಭ್ರಷ್ಟಾಚಾರ ನಿಯಂತ್ರಣ ಅಧಿನಿಯಮ, 1988.

ಅಧಿವಿಚಾರಣಾ ನ್ಯಾಯಾಲಯವು, ದಂಡ ಪ್ರಕ್ರಿಯಾ ಸಂಹಿತೆಯ 397(2)ನೇ ಪ್ರಕರಣದಲ್ಲಿ ಇರುವ ಪ್ರತಿಷೇಧವನ್ನು ದೃಷ್ಟಿಯಲ್ಲಿಟ್ಟುಕೊಂಡು, ರದ್ದುಗೊಳಿಸಲು ಮನವಿ ಮಾಡಿರುವ ಅರ್ಜಿಯನ್ನು ವಜಾಗೊಳಿಸಿದ ಹಾಗೂ ಆರೋಪಗಳನ್ನು ರೂಪಿಸಿರುವ ಆದೇಶದ ವಿರುದ್ಧ ಪುನರ್ ಪರಿಶೀಲನಾ ಅರ್ಜಿಯು ಊರ್ಜಿತವೆ? ಎಂಬ ಕಾನೂನಿನ ಸಾಮಾನ್ಯ ಪ್ರಶ್ನೆಯು ಈ ಎಲ್ಲಾ ಅರ್ಜಿಗಳಲ್ಲಿ ಒಳಗೊಳ್ಳುತ್ತದೆ.

ಈ ಎಲ್ಲಾ ಅರ್ಜಿಗಳಲ್ಲಿರುವ ಪರಿಮಿತ ಅಭಿಪ್ರಾಯವೇನೆಂದರೆ, ಅದರ ಊರ್ಜಿತತೆ. ಆದುದರಿಂದ, ಸಂಗತಿಗಳ ಸವಿವರವಾದ ನಿರೂಪಣೆ ಅಗತ್ಯವಿರುವುದಿಲ್ಲ. ಆದಾಗ್ಯೂ, ಅಗತ್ಯ ಸಂಗತಿಗಳ ವಿಷಯವೇನೆಂದರೆ, ಕೆಲವು ಅಪರಾಧಗಳನ್ನು ಮಾಡಿರುವ ಆಪಾದಿತ ಅರ್ಜಿದಾರರು ಅಧಿವಿಚಾರಣಾ ನ್ಯಾಯಾಲಯದ ಮುಂದೆ ರದ್ದುಗೊಳಿಸಬೇಕಾಗಿ ಕೋರಿದ್ದರು. ಅವರ ಮನವಿಗಳನ್ನು ತಿರಸ್ಕರಿಸಿ ಸಂಬಂಧಪಟ್ಟ ಅಧಿವಿಚಾರಣಾ ನ್ಯಾಯಾಲಯವು, ಆರೋಪಗಳನ್ನು ರೂಪಿಸಲು ಮುಂದಿನ ಕ್ರಮ

*ಕ್ರಿಮಿನಲ್ ಪುನರೀಕ್ಷಣಾ ಅರ್ಜಿ ಸಂ: 57/2017 ಹಾಗೂ ಇದರೊಂದಿಗೆ ಇತರೆ, ದಿನಾಂಕ 24ನೇ ಮಾರ್ಚ್, 2017.

ಕೈಗೊಂಡಿದೆ. ಬಾಧಿತರೆಂದು ಭಾವಿಸಿ ಅವರು ಪುನರ್ ಪರಿಶೀಲನಾ ಅರ್ಜಿಗಳನ್ನು ಸಲ್ಲಿಸಿರುವರು.

ರಿಜಿಸ್ಟ್ರಿಯು, ದಂಡ ಪ್ರಕ್ರಿಯಾ ಸಂಹಿತೆಯ 397(2)ನೇ ಪ್ರಕರಣದಲ್ಲಿ ಒಳಗೊಂಡಿರುವ ಪ್ರತಿಷೇಧವನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಅರ್ಜಿಗಳ ಊರ್ಜಿತತೆಗೆ ಸಂಬಂಧಪಟ್ಟಂತೆ ಆಕ್ಷೇಪವನ್ನು ಎತ್ತಿರುತ್ತದೆ.

ಪುನರ್ ಪರಿಶೀಲನಾ ಅರ್ಜಿಯ ಸಮರ್ಥನೆಗೆ ಸಂಬಂಧಪಟ್ಟಂತೆ ರಿಜಿಸ್ಟ್ರಿಯು ಎತ್ತಿದ ಆಕ್ಷೇಪವು ಅನಿರ್ಣೀತ ವಿಷಯವಾಗಿಲ್ಲ ಎಂಬುದಾಗಿದೆ. ಆರೋಪವನ್ನು ರೂಪಿಸಲು ನಿರ್ದೇಶಿಸುವ ಆದೇಶವು ವಾದಕಾಲೀನ ಆದೇಶವಾಗಿದೆ ಎಂದು ಅಭಿಪ್ರಾಯಪಟ್ಟಿರುವ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಬೇರೆ ಬೇರೆ ತೀರ್ಪುಗಳ ಮೂಲಕ ಇದನ್ನು ಇತ್ಯರ್ಥಪಡಿಸಲಾಗಿದೆ. ಆದುದರಿಂದ ಪುನರ್ ಪರಿಶೀಲನಾ ಅರ್ಜಿಗಳು ಊರ್ಜಿತವಾದುವುಗಳಾಗಿವೆ. ಹಾಗಾಗಿ, 'ಪೂರ್ವ ನಿರ್ಣಯಾನುಸಾರ'ದ ಸಿದ್ಧಾಂತವನ್ನು ಅನ್ವಯಿಸಿ ಪುನರೀಕ್ಷಣಾ ಅರ್ಜಿಯು ಊರ್ಜಿತವಾದುದೆಂದು ಅಭಿಪ್ರಾಯಪಡಬಹುದಾಗಿದೆ;

ಒಟ್ಟಾರೆ ಸಾರಾಂಶವೆಂದರೆ ಅರ್ಜಿದಾರರ ಪರವಾಗಿ ಮಂಡಿಸಲಾದ ವಾದ ಏನೆಂದರೆ, *ವಿ.ಸಿ. ಶುಕ್ಲಾ*ರವರ ಪ್ರಕರಣದಲ್ಲಿನ ಪ್ರಮಾಣವು ಈ ಪ್ರಕರಣಗಳ ಸಂಗತಿಗಳಿಗೆ ಅನ್ವಯವಾಗುವುದಿಲ್ಲ; *ಕೆ.ಕೆ. ಪಟೇಲ್*ರವರ ಪ್ರಕರಣದಲ್ಲಿ ವಿವರಿಸಲಾದ ಕಾರ್ಯಸಾಧ್ಯತೆಯ ಪರೀಕ್ಷೆಯನ್ನು ಅನ್ವಯಿಸಿದರೆ, ಆಗ, ಈ ಪುನರ್‌ಪರಿಶೀಲನಾ ಅರ್ಜಿಗಳು ಊರ್ಜಿತಯೋಗ್ಯವಾಗುತ್ತವೆ.

ಆದುದರಿಂದ, ಮೇಲಿನ *ವಿ.ಸಿ. ಶುಕ್ಲಾ* ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟಿರುವಂತೆ ಪ್ರಕರಣಗಳ ಎರಡೂ ಪ್ರವರ್ಗಗಳಲ್ಲಿ ಆರೋಪ ರೂಪಿಸುವ ಆದೇಶವು, ವಾದಕಾಲೀನ ಆದೇಶವಾಗಿರುತ್ತದೆಯೆನ್ನುವ ತಪ್ಪಿಸಿಕೊಳ್ಳಲಾಗದ ನಿರ್ಣಯಕ್ಕೆ ಮೇಲಿನ ಚರ್ಚೆ ಬಂದು ನಿಲ್ಲುತ್ತದೆ. ಸದರಿ ತೀರ್ಪನ್ನು ಬೃಹತ್ ಪೀಠವು ನೀಡಿದ್ದು, ಹೀಗಾಗಿ ಬದ್ಧತೆಯುಳ್ಳದ್ದಾಗಿದೆ. ಫಲಿತಾಂಶವಾಗಿ ಪುನರ್

**ಪರಿಶೀಲನಾ ಅರ್ಜಿಯನ್ನು ದಂಡ ಪ್ರಕ್ರಿಯಾ ಸಂಹಿತೆಯ 397ನೇ ಪ್ರಕರಣದ (2)ನೇ ಉಪ-ಪ್ರಕರಣದಲ್ಲಿ ಒಳಗೊಂಡಿರುವ ವ್ಯಕ್ತ ಪ್ರತಿಷೇಧದ ದೃಷ್ಟಿಯಿಂದ ಊರ್ಜಿತವಾಗುವುದಿಲ್ಲ. ಪರಿಗಣನೆಗಾಗಿ ರೂಪಿಸಲಾದ ಅಂಶಗಳಿಗೆ ತದನುಸಾರವಾಗಿ ಉತ್ತರಿಸಲಾಗಿದೆ.**

**ಪುನರೀಕ್ಷಣಾ ಅರ್ಜಿಯನ್ನು ವಜಾಗೊಳಿಸಲಾಗಿದೆ.**

***ಉಲ್ಲೇಖಿಸಲಾದ ಮೊಕದ್ದಮೆಗಳು*** ***ಪ್ಯಾರಾಗಳಲ್ಲಿ***

*1. 1980 ಎಸ್‌ಯುಪಿಪಿ ಮಾನ್ಯ ಸರ್ವೋಚ್ಚ ನ್ಯಾಯಾಲಯ ಪ್ರಕರಣಗಳು 92 : ಎಐಆರ್ 1980 ಎಸ್‌ಸಿ 962 ವಿ.ಸಿ. ಶುಕ್ಲಾ -ವಿರುದ್ಧ- ರಾಜ್ಯ ಸಿಬಿಐ ಮೂಲಕ* *(ಉಲ್ಲೇ) 6*

*2. (1977) 4 ಎಸ್‌ಸಿಸಿ 137 ಅಮರ್‌ನಾಥ್ ಮತ್ತು ಇತರರು -ವಿರುದ್ಧ- ಹರಿಯಾಣ ರಾಜ್ಯ ಮತ್ತು ಮತ್ತೊಬ್ಬರು* *(ಉಲ್ಲೇ) 6*

*3. (1977) 4 ಎಸ್‌ಸಿಸಿ 551 ಮಧು ಲಿಮಾಯೆ -ವಿರುದ್ಧ- ಮಹಾರಾಷ್ಟ್ರ ರಾಜ್ಯ* *(ಉಲ್ಲೇ) 6*

*4. (2000)6 ಎಸ್‌ಸಿಸಿ 195 ಕೆ.ಕೆ. ಪಟೇಲ್ ಮತ್ತು ಮತ್ತೊಬ್ಬರು -ವಿರುದ್ಧ- ಗುಜರಾತ್ ರಾಜ್ಯ ಮತ್ತು ಮತ್ತೊಬ್ಬರು* *(ಉಲ್ಲೇ) 6*

*5 (2001) 7 ಎಸ್‌ಸಿಸಿ 401 ಭಾಸ್ಕರ್ ಕೈಗಾರಿಕಾ ನಿಯಮಿತ -ವಿರುದ್ಧ- ಭಿವಾನಿ ಡೆನಿಮ್ ಮತ್ತು ಅಪರೆಲ್ಸ್ ನಿಯಮಿತ ಮತ್ತು ಇತರರು* *(ಉಲ್ಲೇ) 7*

6. (2003) 8 ಎಸ್‌ಸಿಸಿ 628
ವಿವೇಕ್ ಗುಪ್ತಾ –ವಿರುದ್ಧ–
ಕೇಂದ್ರ ತನಿಖಾ ದಳ ಮತ್ತು ಇನ್ನೊಬ್ಬರು (ಉಲ್ಲೇ) 7
7 (2012) 4 ಕೆಎಆರ್ ಎಲ್‌ಜೆ. 483
ಪಿ.ವಿ. ಅಮರ್‌ನಾಥ್ ಪ್ರಸಾದ್ –ವಿರುದ್ಧ–
ಸಿಬಿಐ/ಎಸಿಬಿ, ಬೆಂಗಳೂರು ಮೂಲಕ ರಾಜ್ಯ (ಉಲ್ಲೇ) 7
8. ಕ್ರಿಮಿನಲ್ ಆರ್.ಪಿ ಸಂಖ್ಯೆ 432/2013 ಇದರೊಂದಿಗೆ
ಕ್ರಿಮಿನಲ್ ಪಿ.ಸಂ.2313/2016, ದಿನಾಂಕ 3.11.2016
ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು –ವಿರುದ್ಧ–
ಕರ್ನಾಟಕ ರಾಜ್ಯ (ಉಲ್ಲೇ) 7
9. ಕ್ರಿಮಿನಲ್ ಆರ್.ಪಿ ಸಂಖ್ಯೆ:703/2009, ದಿನಾಂಕ 24.2.2010
ಶ್ರೀಮತಿ ಎ.ಸಿ. ಕಾಮಾಕ್ಷಿ –ವಿರುದ್ಧ–
ಪೊಲೀಸು ಪರಿವೀಕ್ಷಕರು ಸಿಬಿಐ, ಎಸಿಬಿ ಬೆಂಗಳೂರು
ಇವರ ಮೂಲಕ ಭಾರತ ಒಕ್ಕೂಟ (ಉಲ್ಲೇ) 7
10. (2001) 13 ಎಸ್‌ಸಿಸಿ 269
ಹರಿಯಾಣ ಲ್ಯಾಂಡ್ ರೀಕ್ಲೇಮೇಷನ್ ಮತ್ತು
ಡೆವಲಪ್‌ಮೆಂಟ್ ಕಾರ್ಪೊರೇಷನ್ ಲಿಮಿಟೆಡ್ –ವಿರುದ್ಧ–
ಹರಿಯಾಣ ರಾಜ್ಯ (ಉಲ್ಲೇ) 7
11. (2004) 13 ಎಸ್‌ಸಿಸಿ 269
ಪೂನಮ್ ಚಾಂದ್ ಜೈನ್ ಮತ್ತು ಮತ್ತೊಬ್ಬರು
–ವಿರುದ್ಧ– ಫರ್ಝು (ಉಲ್ಲೇ) 7
12. ಕ್ರಿಮಿನಲ್ ಆರ್.ಪಿ. ಸಂಖ್ಯೆ: 1245/2015
ಕೆ.ಪಿ. ಜೇಮ್ಸ್ ಮತ್ತು ಇತರರು –ವಿರುದ್ಧ–
ಪೊಲೀಸು ಪರಿವೀಕ್ಷಕರು, ಸಿಬಿಐ. (ಉಲ್ಲೇ) 7
13. (1990) 4 ಎಸ್‌ಸಿಸಿ 207
ಕೃಷೇಣ ಕುಮಾರ್ –ವಿರುದ್ಧ–
ಭಾರತ ಒಕ್ಕೂಟ ಮತ್ತು ಇತರರು (ಉಲ್ಲೇ) 7

*14. (1999) 3 ಎಸ್‌ಸಿಸಿ 134*
*ರಾಜೇಂದ್ರ ಕುಮಾರ್ ಸೀತಾರಾಮ್ ಪಾಂಡೆ*
*ಮತ್ತು ಇತರರು –ವಿರುದ್ಧ– ಉತ್ತಮ್*
*ಮತ್ತು ಮತ್ತೊಬ್ಬರು (ಉಲ್ಲೇ) 7*

*15. 166 (2010) ಡಿಎಲ್‌ಟಿ 362*
*ಆರ್.ಸಿ. ಸಬರ್‌ವಾಲ್ –ವಿರುದ್ಧ–*
*ಕೇಂದ್ರ ತನಿಖಾ ದಳ (ಉಲ್ಲೇ) 10*

*16. 1992 ಕ್ರಿಮಿನಲ್ ಎಲ್‌ಜೆ 810*
*ಜರ್ನೈಲ್ ಸಿಂಗ್ –ವಿರುದ್ಧ– ರಾಜಸ್ಥಾನ ರಾಜ್ಯ (ಉಲ್ಲೇ) 13*

*17. 1947 1 ಎಫ್‌ಸಿಆರ್ 180 : ಎ.ಐ.ಆರ್. (36)*
*1949 ಫೆಡರಲ್ ನ್ಯಾಯಾಲಯ 1*
*ಎಸ್. ಕುಪ್ಪುಸ್ವಾಮಿ ರಾವ್ –ವಿರುದ್ಧ– ದ ಕಿಂಗ್ (ಉಲ್ಲೇ) 21*

*18. ಎಐಆರ್ 1950 ಎಫ್‌ಸಿ 77:ಎಐಆರ್ (37) 1950*
*ಫೆಡರಲ್ ನ್ಯಾಯಾಲಯ 77*
*ಮಹಮದ್ ಅಮಿನ್ ಬ್ರದರ್ಸ್ ಲಿಮಿಟೆಡ್*
*ಮತ್ತು ಇತರರು –ವಿರುದ್ಧ– ದ ಡೊಮಿನಿಯನ್ ಆಫ್*
*ಇಂಡಿಯಾ ಮತ್ತು ಇತರರು (ಉಲ್ಲೇ) 21*

*19. (1977)2 ಎಸ್‌ಸಿಸಿ 699: 1977 ಎಸ್‌ಸಿಸಿ (ಕ್ರಿಮಿನಲ್) 404:*
*(1977)3 ಎಸ್‌ಸಿಆರ್ 113*
*ಕರ್ನಾಟಕ ರಾಜ್ಯ –ವಿರುದ್ಧ– ಎಲ್. ಮುನಿಸ್ವಾಮಿ (ಉಲ್ಲೇ) 28*

*20. (1972) 3 ಎಸ್‌ಸಿಸಿ 282 : 1972 ಎಸ್‌ಸಿಸಿ (ಕ್ರಿ) 495:*
*ಎಐಆರ್ 1972 ಎಸ್‌ಸಿ 545*
*ಸೆಂಚುರಿ ಸ್ಪಿನ್ನಿಂಗ್ ಅಂಡ್ ಮ್ಯಾನುಫ್ಯಾಕ್ಚರಿಂಗ್*
*ಕಂಪನಿ ಲಿಮಿಟೆಡ್ –ವಿರುದ್ಧ– ಮಹಾರಾಷ್ಟ್ರ ರಾಜ್ಯ (ಉಲ್ಲೇ) 28*

*21. 2011 ಎಸ್‌ಸಿಸಿ ಆನ್‌ಲೈನ್ ಡೆಲ್ 1574*
*ಅನುರ್ ಕುಮಾರ್ ಜೈನ್ –ವಿರುದ್ಧ– ಸಿಬಿಐ (ಉಲ್ಲೇ) 30*

*22. ಐಎಲ್‌ಆರ್ 1998 ಕೆಎಆರ್ 3748*
*ಪಂಚಾಕ್ಷರಿ ಸಿದ್ರಾಮಪ್ಪ ಯೆಲಿಗಾರ್ –ವಿರುದ್ಧ–*
*ಶಿಗ್ಗಾನ್ ತಾಲೂಕ ಶಿಕ್ಷಣ ಸಮಿತಿ ಹಾಗೂ ಇತರರು (ಉಲ್ಲೇ) 32*

*23. (1991) 4 ಎಸ್‌ಸಿಸಿ 139*
*ಉತ್ತರ ಪ್ರದೇಶ ರಾಜ್ಯ –ವಿರುದ್ಧ–*
*ಸಿಂಥೆಟಿಕ್ಸ್ ಅಂಡ್ ಕೆಮಿಕಲ್ಸ್ ಲಿಮಿಟೆಡ್ (ಉಲ್ಲೇ) 33*

ಅರ್ಜಿದಾರರ ಪರ : ಶ್ರೀ ರವೀಂದ್ರ ಬಿ. ದೇಶಪಾಂಡೆ, ವಕೀಲರು;
ಪ್ರತ್ಯರ್ಜಿದಾರರ ಪರ : ಶ್ರೀ ಎಂ. ಮುನಿಗಂಗಪ್ಪ, ಹೆಚ್.ಸಿ.ಜಿ.ಪಿ.

**ಆಜ್ಞೆ**

**ನ್ಯಾಯಮೂರ್ತಿ ಪಿ.ಎಸ್. ದಿನೇಶ್ ಕುಮಾರ್:**

ಅಧಿವಿಚಾರಣಾ ನ್ಯಾಯಾಲಯವು, ದಂಡ ಪ್ರಕ್ರಿಯಾ ಸಂಹಿತೆಯ 397(2)ನೇ ಪ್ರಕರಣದಲ್ಲಿ ಇರುವ ಪ್ರತಿಷೇಧವನ್ನು ದೃಷ್ಟಿಯಲ್ಲಿಟ್ಟುಕೊಂಡು, ರದ್ದುಗೊಳಿಸಲು ಮನವಿ ಮಾಡಿರುವ ಅರ್ಜಿಯನ್ನು ವಜಾಗೊಳಿಸಿದ ಹಾಗೂ ಆರೋಪಗಳನ್ನು ರೂಪಿಸಿರುವ ಆದೇಶದ ವಿರುದ್ಧ ಪುನರ್ ಪರಿಶೀಲನಾ ಅರ್ಜಿಯು ಊರ್ಜಿತವೆ? ಎಂಬ ಕಾನೂನಿನ ಸಾಮಾನ್ಯ ಪ್ರಶ್ನೆಯು ಈ ಎಲ್ಲಾ ಅರ್ಜಿಗಳಲ್ಲಿ ಒಳಗೊಳ್ಳುತ್ತದೆ.

2. ಆಯಾಯ ಅರ್ಜಿಗಳಲ್ಲಿನ ಅರ್ಜಿದಾರರುಗಳಿಗಾಗಿ ಮಾನ್ಯ ಹಿರಿಯ ವಕೀಲ ಮತ್ತು ಮಾನ್ಯ ಇತರ ವಕೀಲರುಗಳಾದ ಶ್ರೀ ಬಿ.ವಿ. ಆಚಾರ್ಯ, ಶ್ರೀ ಪಿ.ಎಸ್. ರಾಜಗೋಪಾಲ್ ಮತ್ತು ಶ್ರೀ ಎಂ.ಟಿ. ನಾಣಯ್ಯ ಇವರುಗಳ ವಾದವನ್ನು ಮತ್ತು ಲೋಕಾಯುಕ್ತದ ಮಾನ್ಯ ವಕೀಲರಾದ ಶ್ರೀ ವೆಂಕಟೇಶ್ ಎಸ್. ಅರಬತ್ತಿ ಹಾಗೂ ರಾಜ್ಯದ ಉಚ್ಚ ನ್ಯಾಯಾಲಯದ ಸರ್ಕಾರಿ ವಕೀಲರಾದ ಶ್ರೀ ಮುನಿಗಂಗಪ್ಪರವರ ವಾದವನ್ನು ಆಲಿಸಲಾಗಿದೆ.

3. ಈ ಅರ್ಜಿಗಳನ್ನು ಎರಡು ಪ್ರವರ್ಗಗಳಾಗಿ ವರ್ಗೀಕರಿಸಬಹುದಾಗಿದೆ. ಅವುಗಳಲ್ಲಿ ಒಂದರಲ್ಲಿ ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮ, 1988 (ಸಂಕ್ಷಿಪ್ತತೆಗಾಗಿ ಪಿ.ಸಿ. ಅಧಿನಿಯಮ) ಹಾಗೆಯೇ ಭಾರತ ದಂಡ ಸಂಹಿತೆ (ಸಂಕ್ಷಿಪ್ತತೆಗಾಗಿ ಭಾದಸಂ) ಅಡಿಯಲ್ಲಿ ದಂಡಿಸಬಹುದಾದ ಆಪಾದಿತ ಅಪರಾಧಗಳನ್ನು ಮಾಡಿದ ಅರ್ಜಿದಾರರು ಮತ್ತೊಂದರಲ್ಲಿ, ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮವನ್ನು ಹೊರತುಪಡಿಸಿದ ಆಪಾದಿತ ಅಪರಾಧಗಳನ್ನು ಎಸಗಿರುವವರ ವರ್ಗಗಳಿವೆ. ಆಯಾಯ ಅರ್ಜಿಗಳಿಗೆ ಸಂಬಂಧಪಟ್ಟ ಅರ್ಜಿದಾರರ ವಿರುದ್ಧ ಆಪಾದಿಸಲಾದ ಅಪರಾಧಗಳು ಈ ಮುಂದಿನಂತಿವೆ:

| ಕ್ರಮ ಸಂಖ್ಯೆ | ಪ್ರಕರಣ ಸಂಖ್ಯೆ ಅಡಿಯಲ್ಲಿ | ಪ್ರಕರಣದ ಸಲ್ಲಿಸಲಾಗಿರುವುದು | ಅಪರಾಧಗಳು |
|---|---|---|---|
| 1. | ಕ್ರಿಮಿನಲ್ ರಿಟ್ ಅರ್ಜಿ ಸಂಖ್ಯೆ 57/2017 (ಕ್ರೈಂ ಸಂ.263/2014 | 397 ಮತ್ತು 401 ದಂಡ ಪ್ರಕ್ರಿಯಾ ಸಂಹಿತೆ | 306 ಭಾರತ ದಂಡ ಸಂಹಿತೆ |
| 2. | ಕ್ರಿಮಿನಲ್ ರಿಟ್ ಅರ್ಜಿ ಸಂಖ್ಯೆ 1257/2016 (ಕ್ರೈಂ ಸಂ.15/2009 | 397 ಮತ್ತು 401 ದಂಡ ಪ್ರಕ್ರಿಯಾ ಸಂಹಿತೆ | ಭ್ರಷ್ಟಚಾರ ಪ್ರತಿಬಂಧ ಅಧಿನಿಯಮದ 13(2)(ನೇ ಪ್ರಕರಣದೊಂದಿಗೆ ಓದಲಾದ 7ನೇ ಪ್ರಕರಣ. |
| 3. | ಕ್ರಿಮಿನಲ್ ರಿಟ್ ಅರ್ಜಿ ಸಂಖ್ಯೆ 153/2017 (ಎಫ್ಐಆರ್ ಸಂ.ಆರ್‌ಸಿ 01(ಎ)/ 2014 – ಬಿಎಲ್ಆರ್ | ದಂಡ ಪ್ರಕ್ರಿಯಾ ಸಂಹಿತೆ 397 | ಭಾರತ ದಂಡ ಸಂಹಿತೆ 409, 420, 467, 468 ಮತ್ತು 471ರೊಂದಿಗೆ ಓದಲಾದ 120–ಬಿ ಪ್ರಕರಣ ಭ್ರಷ್ಟಚಾರ |

| 1 | 2 | 3 | 4 |
|---|---|---|---|
| | | | ಪ್ರತಿಬಂಧ ಅಧಿನಿಯಮದ 13(1)(ಡಿ) ಪ್ರಕರಣದೊಂದಿಗೆ ಓದಲಾದ 13(2)ನೇ ಪ್ರಕರಣ. |
| 4. | ಕ್ರಿಮಿನಲ್ ರಿಟ್ ಅರ್ಜಿ ಸಂಖ್ಯೆ 160/2017 (ಕ್ರೈಂ ಸಂ.117/2015) | 397 ಮತ್ತು 401 ದಂಡ ಪ್ರಕ್ರಿಯಾ ಸಂಹಿತೆ | ಭಾರತ ದಂಡ ಸಂಹಿತೆಯ 376, 417. |
| 5. | ಕ್ರಿಮಿನಲ್ ಆರ್.ಪಿ. ಸಂಖ್ಯೆ 178/2017 (ಕ್ರೈಂ ಸಂ.1/2012 | ದಂಡ ಪ್ರಕ್ರಿಯಾ ಸಂಹಿತೆಯ 397 | ಭ್ರಷ್ಟಚಾರ ಪ್ರತಿಬಂಧ ಅಧಿನಿಯಮದ 13(1)(ಡಿ) ಮತ್ತು (13)(2)ನೇ ಪ್ರಕರಣದೊಂದಿಗೆ ಓದಲಾದ 7ನೇ ಪ್ರಕರಣ. |
| 6. | ಕ್ರಿಮಿನಲ್ ರಿಟ್ ಅರ್ಜಿ ಸಂಖ್ಯೆ 199/2017 (ಕ್ರೈಂ ಸಂ.242/2014) | 397 ಮತ್ತು 401 ದಂಡ ಪ್ರಕ್ರಿಯಾ ಸಂಹಿತೆ | ಭಾರತ ದಂಡ ಸಂಹಿತೆಯ 149ನೇ ಪ್ರಕರಣದೊಂದಿಗೆ 120ಬಿ, 121ಎ, 122, 123, 153ಎ, 212 ಪ್ರಕರಣ ಕಾನೂನು ಬಾಹಿರ ಚಟುವಟಿಕೆಗಳ (ಪ್ರತಿಬಂಧ |

| 1 | 2 | 3 | 4 |
|---|---|---|---|
| | | | ಅಧಿನಿಯಮದ 10, 11, 13, 16, 17, 18, 19, 20 ಮತ್ತು 21ನೇ ಪ್ರಕರಣಗಳು, ಭಾರತೀಯ ಸ್ಫೋಟಕ ಅಂಶ ಅಧಿನಿಯಮದ 5 ಮತ್ತು 6ನೇ ಪ್ರಕರಣಗಳೊಂದಿಗೆ ಓದಲಾದ 9(ಬಿ) ಪ್ರಕರಣ ಮತ್ತು ಶಸ್ತ್ರಾಸ್ತ್ರಗಳ ಅಧಿನಿಯಮದ 3 ಮತ್ತು 25ನೇ ಪ್ರಕರಣಗಳು. |
| 7. | ಕ್ರಿಮಿನಲ್ ರಿಟ್ ಅರ್ಜಿ ಸಂಖ್ಯೆ 9/2017 (ವಿಶೇಷ ಸಿ.ಸಿ. ಸಂ.36/2014 | ದಂಡ ಪ್ರಕ್ರಿಯಾ ಸಂಹಿತೆ 397 ಮತ್ತು 401 | ಭಾರತ ದಂಡ ಸಂಹಿತೆಯ 409 ಮತ್ತು 420ನೇ ಪ್ರಕರಣದೊಂದಿಗೆ ಓದಲಾದ 120–ಬಿ ಪ್ರಕರಣ ಹಾಗೂ ಭ್ರಷ್ಟಚಾರ ಪ್ರತಿಬಂಧ ಅಧಿನಿಯಮದ 13(1)(ಸಿ) ಮತ್ತು (ಡಿ) ಪ್ರಕರಣ ದೊಂದಿಗೆ ಓದಲಾದ 7, 13(2)ನೇ ಪ್ರಕರಣಗಳು. |

| 1 | 2 | 3 | 4 |
|---|---|---|---|
| 8. | ಕ್ರಿಮಿನಲ್ ರಿಟ್ ಅರ್ಜಿ ಸಂಖ್ಯೆ 9/2017 (ವಿಶೇಷ ಸಿ.ಸಿ. ಸಂ.36/2014 | ದಂಡ ಪ್ರಕ್ರಿಯಾ ಸಂಹಿತೆ 397 ಮತ್ತು 401 | ಭಾರತ ದಂಡ ಸಂಹಿತೆಯ 409 ಮತ್ತು 420ನೇ ಪ್ರಕರಣದೊಂದಿಗೆ ಓದಲಾದ 120–ಬಿ ಪ್ರಕರಣ. ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮ, |
| 9. | ಕ್ರಿಮಿನಲ್ ರಿಟ್ ಅರ್ಜಿ ಸಂಖ್ಯೆ 185/2017 (ವಿಶೇಷ ಸಿ.ಸಿ. ಸಂ.38/2014 | ದಂಡ ಪ್ರಕ್ರಿಯಾ ಸಂಹಿತೆ 397 | ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮ, 7, 13(2) 13(1)(ಸಿ) ಮತ್ತು (ಡಿ) ಮತ್ತು ಭಾರತ ದಂಡ ಸಂಹಿತೆಯ 409 ಮತ್ತು 420ನೇ ಪ್ರಕರಣದೊಂದಿಗೆ ಓದಲಾದ 120–ಬಿ ಪ್ರಕರಣ. |
| 10. | ಕ್ರಿಮಿನಲ್ ರಿಟ್ ಅರ್ಜಿ ಸಂಖ್ಯೆ 228/2017 ಎಫ್ಐಆರ್ ಸಂ.ಆರ್‌ಸಿ 01(ಎ)/2014 – ಬಿಎಲ್ಆರ್. | ದಂಡ ಪ್ರಕ್ರಿಯಾ ಸಂಹಿತೆ 397 | ಭ್ರಷ್ಟಚಾರ ಪ್ರತಿಬಂಧ ಅಧಿನಿಯಮದ 7, 13(2) 13(1)(ಸಿ) ಮತ್ತು (ಡಿ) ಪ್ರಕರಣ ಮತ್ತು ಭಾರತ ದಂಡ |

| 1 | 2 | 3 | 4 |
|---|---|---|---|
| | | | ಸಂಹಿತೆಯ 409 ಮತ್ತು 420ನೇ ಪ್ರಕರಣದೊಂದಿಗೆ ಓದಲಾದ 120ನೇ ಪ್ರಕರಣ. |
| 11. | ಕ್ರಿಮಿನಲ್ ರಿಟ್ ಅರ್ಜಿ ಸಂಖ್ಯೆ: 10/2017 (ವಿಶೇಷ ಸಿಸಿ. ಸಂ.37/2014) | ದಂಡ ಪ್ರಕ್ರಿಯಾ ಸಂಹಿತೆಯ 397 ಮತ್ತು 401. | ಭಾರತ ದಂಡ ಸಂಹಿತೆಯ 120–ಬಿ, 409 ಮತ್ತು 420ನೇ ಪ್ರಕರಣ ಮತ್ತು ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮದ 13(1)(ಸಿ) ಮತ್ತು (ಡಿ) ನೊಂದಿಗೆ ಓದಲಾದ 7, 13(2)ನೇ ಪ್ರಕರಣಗಳು. |
| 12. | ಕ್ರಿಮಿನಲ್ ರಿಟ್ ಅರ್ಜಿ ಸಂಖ್ಯೆ: 244/2017 (ವಿಶೇಷ ಸಿ.ಸಿ.ಸಂ.101/2013) | ದಂಡ ಪ್ರಕ್ರಿಯಾ ಸಂಹಿತೆಯ 397 ಮತ್ತು 401 | ಭ್ರಷ್ಟಚಾರ ಪ್ರತಿಬಂಧ ಅಧಿನಿಯಮದ 13(2)ನೇ ಪ್ರಕರಣ ದೊಂದಿಗೆ ಓದಲಾದ 7, 8, 10, 13(1)(ಡಿ) ಪ್ರಕರಣ. |
| 13. | ಕ್ರಿಮಿನಲ್ ರಿಟ್ ಅರ್ಜಿ ಸಂಖ್ಯೆ: | ದಂಡ ಪ್ರಕ್ರಿಯಾ ಸಂಹಿತೆಯ 397 | ಭಾರತ ದಂಡ ಸಂಹಿತೆಯ 306 |

| 1 | 2 | 3 | 4 |
|---|---|---|---|
| | 290/2017 (ವಿಶೇಷ ಸಿ.ಸಿ.ಸಂ.100/2016) (ಮೊದಲ ಮಾಹಿತಿ ವರದಿಯ ಕ್ರೈಮ್ ಸಂ.10/2010) | ಮತ್ತು 401 | |
| 14. | ಕ್ರಿಮಿನಲ್ ರಿಟ್ ಅರ್ಜಿ ಸಂಖ್ಯೆ:324/2017 (ವಿಶೇಷ ಸಿ.ಸಿ. ಸಂ.77/2007) | ದಂಡ ಪ್ರಕ್ರಿಯಾ ಸಂಹಿತೆಯ 397 ಮತ್ತು 401 | ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮದ 13(2)ನೇ ಪ್ರಕರಣ ದೊಂದಿಗೆ ಓದಲಾದ 13(1) (ಇ) ಪ್ರಕರಣ. |

4. ಈ ಎಲ್ಲಾ ಅರ್ಜಿಗಳಲ್ಲಿರುವ ಪರಿಮಿತ ಅಭಿಪ್ರಾಯವೇನೆಂದರೆ, ಅದರ ಊರ್ಜಿತತೆ. ಆದುದರಿಂದ, ಸಂಗತಿಗಳ ಸವಿವರವಾದ ನಿರೂಪಣೆ ಅಗತ್ಯವಿರುವುದಿಲ್ಲ. ಆದಾಗ್ಯೂ, ಅಗತ್ಯ ಸಂಗತಿಗಳ ವಿಷಯವೇನೆಂದರೆ, ಕೆಲವು ಅಪರಾಧಗಳನ್ನು ಮಾಡಿರುವ ಆಪಾದಿತ ಅರ್ಜಿದಾರರು ಅಧಿವಿಚಾರಣಾ ನ್ಯಾಯಾಲಯದ ಮುಂದೆ ರದ್ದುಗೊಳಿಸಬೇಕಾಗಿ ಕೋರಿದ್ದರು. ಅವರ ಮನವಿಗಳನ್ನು ತಿರಸ್ಕರಿಸಿ ಸಂಬಂಧಪಟ್ಟ ಅಧಿವಿಚಾರಣಾ ನ್ಯಾಯಾಲಯವು, ಆರೋಪಗಳನ್ನು ರೂಪಿಸಲು ಮುಂದಿನ ಕ್ರಮ ಕೈಗೊಂಡಿದೆ. ಬಾಧಿತರೆಂದು ಭಾವಿಸಿ ಅವರು ಪುನರ್ ಪರಿಶೀಲನಾ ಅರ್ಜಿಗಳನ್ನು ಸಲ್ಲಿಸಿರುವರು.

5. ರಿಜಿಸ್ಟ್ರಿಯು, ದಂಡ ಪ್ರಕ್ರಿಯಾ ಸಂಹಿತೆಯ 397(2)ನೇ ಪ್ರಕರಣದಲ್ಲಿ ಒಳಗೊಂಡಿರುವ ಪ್ರತಿಷೇಧವನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಅರ್ಜಿಗಳ ಊರ್ಜಿತತೆಗೆ ಸಂಬಂಧಪಟ್ಟಂತೆ ಆಕ್ಷೇಪವನ್ನು ಎತ್ತಿರುತ್ತದೆ.

6. ಅರ್ಜಿದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು ಮಂಡಿಸಿದ ವಾದಗಳನ್ನು ಈ ಮುಂದಿನಂತೆ ಸಂಕ್ಷಿಪ್ತಗೊಳಿಸಬಹುದಾಗಿದೆ:

i) ಆಪಾದಿತರನ್ನು ಬಿಡುಗಡೆಗೊಳಿಸುವುದನ್ನು ನಿರಾಕರಿಸಿ ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ಆದೇಶವು ವಾದಕಾಲೀನ ಆದೇಶವಾಗಿದೆ ಎಂಬುದಾಗಿದೆ;

ii) ಪುನರ್ ಪರಿಶೀಲನಾ ಅರ್ಜಿಯ ಸಮರ್ಥನೆಗೆ ಸಂಬಂಧಪಟ್ಟಂತೆ ರಿಜಿಸ್ಟ್ರಿಯು ಎತ್ತಿದ ಆಕ್ಷೇಪವು ಅನಿರ್ಣೀತ ವಿಷಯವಾಗಿಲ್ಲ ಎಂಬುದಾಗಿದೆ. ಆರೋಪವನ್ನು ರೂಪಿಸಲು ನಿರ್ದೇಶಿಸುವ ಆದೇಶವು ವಾದಕಾಲೀನ ಆದೇಶವಾಗಿದೆ ಎಂದು ಅಭಿಪ್ರಾಯಪಟ್ಟಿರುವ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಬೇರೆ ಬೇರೆ ತೀರ್ಪುಗಳ ಮೂಲಕ ಇದನ್ನು ಇತ್ಯರ್ಥಪಡಿಸಲಾಗಿದೆ. ಆದುದರಿಂದ ಪುನರ್ ಪರಿಶೀಲನಾ ಅರ್ಜಿಗಳು ಊರ್ಜಿತವಾದುವುಗಳಾಗಿವೆ. ಹಾಗಾಗಿ, 'ಪೂರ್ವ ನಿರ್ಣಯಾನುಸಾರ'ದ ಸಿದ್ಧಾಂತವನ್ನು ಅನ್ವಯಿಸಿ ಪುನರೀಕ್ಷಣಾ ಅರ್ಜಿಯು ಊರ್ಜಿತವಾದುದೆಂದು ಅಭಿಪ್ರಾಯಪಡಬಹುದಾಗಿದೆ;

iii) ***ವಿ.ಸಿ. ಶುಕ್ಲಾ –ವಿರುದ್ಧ– ರಾಜ್ಯ ಸಿಬಿಐ ಮೂಲಕ***[1], ಪ್ರಕರಣದಲ್ಲಿನ ತೀರ್ಪನ್ನು ಈ ಪ್ರಕರಣದ ಸಂಗತಿಗಳಿಗೆ ಅನ್ವಯಿಸಲು ಸಾಧ್ಯವಿಲ್ಲ. ಏಕೆಂದರೆ ಸದರಿ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಇದನ್ನು ಪ್ರಕರಣಗಳ ತ್ವರಿತಗತಿಯ ವಿಲೇವಾರಿಗಾಗಿ ವಿಶೇಷ ಉದ್ದೇಶಕ್ಕಾಗಿ ಅಧಿನಿಯುಮಿಸಲಾಗಿದ್ದ ವಿಶೇಷ ನ್ಯಾಯಾಲಯಗಳ ಅಧಿನಿಯಮ, 1979ರ 11(2)ನೇ ಪ್ರಕರಣದ ಅಡಿಯಲ್ಲಿ ಅಪೀಲಿನ ಊರ್ಜಿತತೆಯನ್ನು ಪರಿಗಣಿಸಿದ್ದು ಮತ್ತು

1. (1980 ಎಸ್‌ಯುಪಿಪಿ ಮಾನ್ಯ ಸರ್ವೋಚ್ಚ ನ್ಯಾಯಾಲಯ ಪ್ರಕರಣಗಳು 92:ಎಐಆರ್ 1980 ಎಸ್‌ಸಿ 962

ವಿಶೇಷ ನ್ಯಾಯಾಲಯದಲ್ಲಿ ಉಚ್ಚ ನ್ಯಾಯಾಲಯದ ಪೀಠಾಸೀನ ನ್ಯಾಯಾಧೀಶರು ಅಧ್ಯಕ್ಷರಾಗಿದ್ದರು;

iv) ವಿಶೇಷ ಅಧಿನಿಯಮದ ಉದ್ದೇಶ ಮತ್ತು ಆಶಯವನ್ನು ದೃಷ್ಟಿಯಲ್ಲಿಟ್ಟುಕೊಂಡು ವಿ.ಸಿ. ಶುಕ್ಲಾ ಪ್ರಕರಣದಲ್ಲಿ ತೀರ್ಪನ್ನು ನೀಡಿದ್ದು, ಸರ್ವೋಚ್ಚ ನ್ಯಾಯಾಲಯಕ್ಕೆ ಪ್ರಕರಣಗಳು ಅವ್ಯಾಹತವಾಗಿ ಹರಿದುಬಂದಿರುವುದನ್ನು ತಪ್ಪಿಸುವುದನ್ನು ಖಚಿತಪಡಿಸುವುದಾಗಿದೆ;

v) ದಂಡ ಪ್ರಕ್ರಿಯಾ ಸಂಹಿತೆಯ 397ನೇ ಪ್ರಕರಣದ (2)ನೇ ಉಪ-ಪ್ರಕರಣವು, ಪುನರ್ ಪರಿಶೀಲನಾ ಅರ್ಜಿಯನ್ನು ಪುರಸ್ಕರಿಸುವುದರಿಂದ ಪ್ರತಿಬಂಧಕಾಜ್ಞೆಯನ್ನು ಇಟ್ಟಿದ್ದರೂ, ಎಲ್ಲಾ ಆದೇಶಗಳನ್ನು, ಎರಡು ಪ್ರವರ್ಗಗಳು ಎಂದರೆ 'ವಾದಕಾಲೀನ ಅರ್ಜಿ' ಮತ್ತು 'ಅಂತಿಮ' ಎಂಬವುಗಳ ಅಡಿಯಲ್ಲಿ ಮಾತ್ರವೇ ವರ್ಗೀಕರಿಸಲು ಸಾಧ್ಯವಾಗುವುದಿಲ್ಲ. ಮೂರನೇ ವಿಧದ ಆದೇಶ ಎಂದರೆ, ವಿ.ಸಿ. ಶುಕ್ಲಾ ಪ್ರಕರಣದಲ್ಲಿ ಪರಿಭಾಷಿಸಲಾದಂತೆ 'ಮಧ್ಯಂತರ ಆದೇಶ' ಸಹ ಇರುತ್ತದೆ;

vi) ***ಅಮರ್‌ನಾಥ್ ಮತ್ತು ಇತರರು –ವಿರುದ್ಧ– ಹರಿಯಾಣ ರಾಜ್ಯ ಮತ್ತು ಮತ್ತೊಬ್ಬರು***[2] ಹಾಗೂ ***ಮಧು ಲಿಮಾಯೆ –ವಿರುದ್ಧ– ಮಹಾರಾಷ್ಟ್ರ ರಾಜ್ಯ***[3], ಪ್ರಕರಣದಲ್ಲಿನ ತೀರ್ಮಗಳು, ಈ ಅರ್ಜಿಗಳಲ್ಲಿ ಒಳಗೊಂಡ ಅಂಶವನ್ನು ತಿಳಿಸುತ್ತವೆ. ಆ ಪ್ರಕರಣಗಳನ್ನು ಸರಿಯಾಗಿ ನಿರ್ಧರಿಸಲಾಗಿತ್ತು ಎಂದು ವಿ.ಸಿ. ಶುಕ್ಲಾ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟಿದೆ;

2. (1977) 4 ಎಸ್‌ಸಿಸಿ 137
3. (1977) 4 ಎಸ್‌ಸಿಸಿ 551

vii) ***ಕೆ.ಕೆ. ಪಟೇಲ್ ಮತ್ತು ಮತ್ತೊಬ್ಬರು –ವಿರುದ್ಧ–ಗುಜರಾತ್ ರಾಜ್ಯ ಮತ್ತು ಮತ್ತೊಬ್ಬರು***[4], ಪ್ರಕರಣದಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು 'ಕಾರ್ಯಸಾಧ್ಯ ಪರೀಕ್ಷೆ'ಯನ್ನು ಅನ್ವಯಿಸಿದ ನಂತರ, ಬಿಡುಗಡೆಗೊಳಿಸುವ ಮನವಿಯನ್ನು ನಿರಾಕರಿಸುವ ಆದೇಶವನ್ನು ಪರಿಶೀಲನಾರ್ಹವಾದುದೆಂದು ಅಭಿಪ್ರಾಯಪಟ್ಟಿದೆ. ಅನ್ವಯಿಸಲಾದ ಪರೀಕ್ಷೆಯು, ಯಾರೇ ಪಕ್ಷಕಾರನಿಂದ ಎತ್ತಲಾದ ಆಕ್ಷೇಪಣೆಗಳು, ವ್ಯವಹರಣೆಗಳನ್ನು ಮುಕ್ತಾಯಗೊಳಿಸುವುದರಲ್ಲಿ ಫಲಿತವಾಗುತ್ತವೆಂದು ಅಭಿಪ್ರಾಯಪಟ್ಟಿದ್ದಲ್ಲಿ ಅಂಥ ಆಕ್ಷೇಪಣೆಗಳ ಮೇಲೆ ಹೊರಡಿಸಿದ ಆದೇಶವು ಸ್ವರೂಪದಲ್ಲಿ ವಾದಕಾಲೀನವಾಗಿರುವುದಿಲ್ಲ.

7. ತಮ್ಮ ವಾದಗಳನ್ನು ಸಮರ್ಥಿಸಲು ಅರ್ಜಿದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು ಈ ಮುಂದಿನ ಆಧಾರಗಳ ಮೇಲೆ ಅವಲಂಬನೆಯನ್ನು ಇಟ್ಟಿರುತ್ತಾರೆ:

ಎ) ಅಮರ್‌ನಾಥ್ ಮತ್ತು ಇತರರು –ವಿರುದ್ಧ– ಹರಿಯಾಣ ರಾಜ್ಯ ಮತ್ತು ಮತ್ತೊಬ್ಬರು [(1974ರ ಎಸ್‌ಸಿಸಿ 137)];

ಬಿ) ಮಧು ಲಿಮಾಯೆ –ವಿರುದ್ಧ– ಮಹಾರಾಷ್ಟ್ರ ರಾಜ್ಯ [(1977) 4 ಎಸ್‌ಸಿಸಿ 551];

ಸಿ) ಕೆ.ಕೆ. ಪಟೇಲ್ ಮತ್ತು ಮತ್ತೊಬ್ಬರು –ವಿರುದ್ಧ– ಗುಜರಾತ್ ರಾಜ್ಯ ಮತ್ತು ಮತ್ತೊಬ್ಬರು [(2000) 6 ಎಸ್‌ಸಿಸಿ 195];

ಡಿ) ***ಭಾಸ್ಕರ್ ಕೈಗಾರಿಕಾ ನಿಯಮಿತ –ವಿರುದ್ಧ– ಭಿವಾನಿ ಡೆನಿಮ್ ಮತ್ತು ಅಪರೆಲ್ಸ್ ನಿಯಮಿತ ಮತ್ತು ಇತರರು***[5];

4. (2000)6 ಎಸ್‌ಸಿಸಿ 195

5. [2001) 7 ಎಸ್‌ಸಿಸಿ 401

ಇ) ***ವಿವೇಕ್ ಗುಪ್ತಾ –ವಿರುದ್ಧ– ಕೇಂದ್ರ ತನಿಖಾ ದಳ ಮತ್ತು ಇನ್ನೊಬ್ಬರು***[6];

ಎಫ್) ***ಪಿ.ವಿ. ಅಮರ್‌ನಾಥ್ ಪ್ರಸಾದ್ –ವಿರುದ್ಧ– ಸಿಬಿಐ/ಎಸಿಬಿ, ಬೆಂಗಳೂರು ಮೂಲಕ ರಾಜ್ಯ***[7];

ಜಿ) ***ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು –ವಿರುದ್ಧ– ಕರ್ನಾಟಕ ರಾಜ್ಯ***[8].

ಎಚ್) ***ಶ್ರೀಮತಿ ಎ.ಸಿ. ಕಾಮಾಕ್ಷಿ –ವಿರುದ್ಧ– ಪೋಲೀಸು ಪರಿವೀಕ್ಷಕರು, ಸಿಬಿಐ, ಎಸಿಬಿ ಬೆಂಗಳೂರು ಇವರ ಮೂಲಕ ಭಾರತ ಒಕ್ಕೂಟ***[9];

ಐ) ***ಹರಿಯಾಣ ಲ್ಯಾಂಡ್ ರೀಕ್ಲೇಮೇಷನ್ ಮತ್ತು ಡೆವಲಪ್‌ಮೆಂಟ್ ಕಾರ್ಪೋರೇಷನ್ ಲಿಮಿಟೆಡ್ –ವಿರುದ್ಧ– ಹರಿಯಾಣ ರಾಜ್ಯ***[10];

ಜೆ) ***ಪೂನಮ್ ಚಾಂದ್ ಜೈನ್ ಮತ್ತು ಮತ್ತೊಬ್ಬರು –ವಿರುದ್ಧ– ಫಝ್ರು*** [11];

ಕೆ) ***ಕೆ.ಪಿ. ಜೇಮ್ಸ್ ಮತ್ತು ಇತರರು –ವಿರುದ್ಧ– ಪೋಲೀಸು ಪರಿವೀಕ್ಷಕರು, ಸಿಬಿಐ***[12].

ಎಲ್) ***ಕೃಷೇಣ ಕುಮಾರ್ –ವಿರುದ್ಧ– ಭಾರತ ಒಕ್ಕೂಟ ಮತ್ತು ಇತರರು*** [13];

---

6. (2003) 8 ಎಸ್‌ಸಿಸಿ 628 7. (2012) 4 ಕೆಎಆರ್ ಎಲ್‌ಜೆ. 483
8. ಕ್ರಿಮಿನಲ್ ಆರ್.ಪಿ ಸಂಖ್ಯೆ 432/2013 ಇದರೊಂದಿಗೆ ಕ್ರಿಮಿನಲ್ ಪಿ.ಸಂ.2313/2016, ಪ್ರಕರಣದಲ್ಲಿ ದಿನಾಂಕ 3.11.2016
9. ಕ್ರಿಮಿನಲ್ ಆರ್.ಪಿ ಸಂಖ್ಯೆ:703/2009, ದಿನಾಂಕ 24.2.2010
10. (2004) 13 ಎಸ್‌ಸಿಸಿ 269 11. (2004) 13 ಎಸ್‌ಸಿಸಿ 269
12. ಕ್ರಿಮಿನಲ್ ಆರ್.ಪಿ. ಸಂಖ್ಯೆ: 1245/2015
13. (1990 4 ಎಸ್‌ಸಿಸಿ 207]

ಎಂ) ***ರಾಜೇಂದ್ರ ಕುಮಾರ್ ಸೀತಾರಾಮ್ ಪಾಂಡೆ ಮತ್ತು ಇತರರು –ವಿರುದ್ಧ– ಉತ್ತಮ್ ಮತ್ತು ಮತ್ತೊಬ್ಬರು***[14];

8. ಒಟ್ಟಾರೆ ಸಾರಾಂಶವೆಂದರೆ ಅರ್ಜಿದಾರರ ಪರವಾಗಿ ಮಂಡಿಸಲಾದ ವಾದ ಏನೆಂದರೆ, ***ವಿ.ಸಿ. ಶುಕ್ಲಾ***ರವರ ಪ್ರಕರಣದಲ್ಲಿನ ಪ್ರಮಾಣವು ಈ ಪ್ರಕರಣಗಳ ಸಂಗತಿಗಳಿಗೆ ಅನ್ವಯವಾಗುವುದಿಲ್ಲ; ***ಕೆ.ಕೆ. ಪಟೇಲ್***ರವರ ಪ್ರಕರಣದಲ್ಲಿ ವಿವರಿಸಲಾದ ಕಾರ್ಯಸಾಧ್ಯತೆಯ ಪರೀಕ್ಷೆಯನ್ನು ಅನ್ವಯಿಸಿದರೆ, ಆಗ, ಈ ಪುನರ್‌ಪರಿಶೀಲನಾ ಅರ್ಜಿಗಳು ಊರ್ಜಿತಯೋಗ್ಯವಾಗುತ್ತವೆ.

9. ಲೋಕಾಯುಕ್ತ/ಎಸಿಬಿಯವರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರಾದ ಶ್ರೀ ವೆಂಕಟೇಶ್ ಎಸ್ ಅರಬತ್ತಿಯವರು, ಅರ್ಜಿಗಳ ಬಗ್ಗೆ ವಾದಿಸುತ್ತಾ ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮವನ್ನು ಒಳಗೊಂಡಿರುವ ಈ ಪ್ರಕರಣಗಳ ಊರ್ಜಿತತ್ವಕ್ಕೆ ಸಂಬಂಧಪಟ್ಟ ವಿವಾದವನ್ನು, ಮಾನ್ಯ ಸರ್ವೋಚ್ಚ ನ್ಯಾಯಾಲಯವು ವಿ.ಸಿ. ಶುಕ್ಲಾರವರ ಪ್ರಕರಣದಲ್ಲಿ ನಿರ್ಧರಿಸಿದೆಯೆಂದು ನಿವೇದಿಸಿದ್ದಾರೆ.

10. ಅವರು ***ಆರ್.ಸಿ. ಸಬರ್‌ವಾಲ್ –ವಿರುದ್ಧ– ಕೇಂದ್ರ ತನಿಖಾ ದಳ***[15], ಪ್ರಕರಣದಲ್ಲಿ ತೀರ್ಪಿನ ಮೇಲೆ ಅವಲಂಬಿತರಾಗಿದ್ದಾರೆ ಮತ್ತು ***ಅಮರ್‌ನಾಥ್ ಮಧು ಲಿಮಾಯೆ*** ಮತ್ತು ***ಕೆ.ಕೆ. ಪಟೇಲ್*** ಪ್ರಕರಣದಲ್ಲಿ ಪ್ರಾಧಿಕಾರಗಳನ್ನು ಪರಿಗಣಿಸಿದ ನಂತರ ಪುನರ್ ಪರಿಶೀಲನಾ ಅರ್ಜಿಯು ಊರ್ಜಿತವಾಗುವುದಿಲ್ಲ ಎಂದು ಮಾನ್ಯ ದೆಹಲಿ ಉಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟಿದೆಯೆಂಬುದನ್ನು ತೋರಿಸಿದ್ದಾರೆ.

11. ಅಷ್ಟೇ ಅಲ್ಲದೆ, ಶ್ರೀ ಅರಬತ್ತಿಯವರು, ***ವಿ.ಸಿ. ಶುಕ್ಲಾ*** ಪ್ರಕರಣದಲ್ಲಿ ಘೋಷಿಸಲಾದ ಕಾನೂನಿನ ಹಿನ್ನೆಲೆಯಲ್ಲಿ, ***ಎ.ಸಿ. ಕಾಮಾಕ್ಷಿ, ಪಿ.ವಿ. ಅಮರ್‌ನಾಥ್ ಪ್ರಸಾದ್*** ಮತ್ತು ***ಕಟ್ಟಾ ಸುಬ್ರಹ್ಮಣ್ಯ ನಾಯ್ಡು*** ರವರ ಪ್ರಕರಣಗಳಲ್ಲಿ ಈ ನ್ಯಾಯಾಲಯವು

14. (1999) 3 ಎಸ್‌ಸಿಸಿ 134

15. 166 (2010) ಡಿಎಲ್‌ಟಿ 362

ನೀಡಿದ ತೀರ್ಪುಗಳ ಅನುಪಾತವನ್ನು ಅನ್ವಯಿಸಲಾಗುವುದಿಲ್ಲವೆಂದು ನಿವೇದಿಸಿದ್ದಾರೆ.

12. ***ಪಿ.ವಿ. ಅಮರ್‌ನಾಥ್ ಪ್ರಸಾದ್***ರವರ ಪ್ರಕರಣಕ್ಕೆ ಸಂಬಂಧಿಸಿದಂತೆ ಅವರು, ಈ ನ್ಯಾಯಾಲಯವು, ಬಹುಸಂಖ್ಯೆಗೆ ವಿರುದ್ಧವಾಗಿರುವ ***ವಿ.ಸಿ. ಶುಕ್ಲಾ***ರವರ ಪ್ರಕರಣವನ್ನು ದೃಷ್ಟಿಯಲ್ಲಿಟ್ಟುಕೊಂಡು ವಿರಳ ಸಂಖ್ಯೆಯನ್ನು ಪರಿಗಣಿಸಲಾಗಿದ್ದು ಹೀಗಾಗಿ ಅದನ್ನು ಪರಿಗಣಿಸಲು ಸಾಧ್ಯವಿಲ್ಲವೆಂಬುದನ್ನು ಎತ್ತಿತೋರಿಸಿದ್ದಾರೆ.

13. ***ಕಟ್ಟಾ ಸುಬ್ರಹ್ಮಣ್ಯನಾಯ್ಡು***ರವರ ಪ್ರಕರಣಕ್ಕೆ ಸಂಬಂಧಪಟ್ಟಂತೆ ಅವರು, ಈ ನ್ಯಾಯಾಲಯವು, ಪೋರ್ವೋಕ್ತಗಳ ಮೇಲೆ ಮಾನ್ಯ ರಾಜಸ್ಥಾನ ಉಚ್ಚ ನ್ಯಾಯಾಲಯವು ನಿರ್ಧರಿಸಿದ ***ಜರ್ನೈಲ್ ಸಿಂಗ್ –ವಿರುದ್ಧ– ರಾಜಸ್ಥಾನ ರಾಜ್ಯ***[16], ಪ್ರಕರಣದ ಮೇಲೆ ಅವಲಂಬಿತನಾಗಿದೆಯೆಂದು, ಮಾನ್ಯ ಸರ್ವೋಚ್ಚ ನ್ಯಾಯಾಲಯವು ಇದನ್ನು ನೀಡಿದೆಯೆಂದು ನಿವೇದಿಸಿದ್ದಾರೆ. ಆದುದರಿಂದ ***ಕಟ್ಟಾ ಸುಬ್ರಮಣ್ಯಾ ನಾಯ್ಡು***ರವರ ಪ್ರಕರಣದಲ್ಲಿ ಅನುಪಾತವನ್ನು ನಮ್ಮ ಮುಂದಿರುವ ಪ್ರಕರಣಗಳಿಗೆ ಅನ್ವಯಿಸಲಾಗುವುದಿಲ್ಲವೆಂದು ನಿವೇದಿಸಿದ್ದಾರೆ.

14. ಪೂರ್ವ ನಿರ್ಣಯಾನುಸಾರಕ್ಕೆ ಸಂಬಂಧಿಸಿದ ವಾದಗಳಿಗೆ ಪ್ರತಿಕ್ರಿಯಿಸುತ್ತಾ, ಶ್ರೀ ಅರಬತ್ತಿಯವರು, ***ಮಧು ಲಿಮಾಯೆ*** ಮತ್ತು ***ಅಮರ್‌ನಾಥ್*** ಪ್ರಕರಣಗಳಲ್ಲಿ, ಒಳಗೊಂಡಿರುವ ವಿವಾದವು 'ಆರೋಪಗಳನ್ನು ರೂಪಿಸುವುದಾಗಿರುವುದಿಲ್ಲವೆಂದು ನಿವೇದಿಸಿದ್ದಾರೆ. ಆದುದರಿಂದ ***ವಿ.ಸಿ. ಶುಕ್ಲಾ***ರವರ ಪ್ರಕರಣದಲ್ಲಿನ ಆಧಾರಪೂರ್ವಕ ಉದ್ಧರಣೆಯ ಹಿನ್ನೆಲೆಯಲ್ಲಿ ಇದು ನೇರವಾಗಿ ವಿಷಯಕ್ಕೆ ಸಂಬಂಧಿಸಿದ್ದು, ಇತರ ತೀರ್ಪುಗಳಿಗೆ ಬದ್ಧವಾಗಿರುವುದಿಲ್ಲ.

15. ಮಾನ್ಯ, ಉಚ್ಚ ನ್ಯಾಯಾಲಯದ ಸರ್ಕಾರಿ ವಕೀಲರು, ಪುನರ್ ಪರಿಶೀಲನಾ ಅರ್ಜಿಗಳನ್ನು, ಭ್ರಷ್ಟಾಚಾರ ನಿಯಂತ್ರಣ ಅಧಿನಿಯಮದ ಅಡಿಯಲ್ಲಿ ಅಪರಾಧಗಳನ್ನು

16. (1992 ಕ್ರಿಮಿನಲ್ ಎಲ್‌ಜೆ 810

ಆಪಾದಿಸಿದ್ದ ಪ್ರಕರಣಗಳನ್ನು ಹೊರತುಪಡಿಸಿ ಊರ್ಜಿತವಾಗುವುದಿಲ್ಲವೆಂದು ನಿವೇದಿಸಿದ್ದಾರೆ.

16. ಸಾಕ್ಷ್ಯಾಧಾರ ಪತ್ರಗಳು ಮತ್ತು ಉದ್ಧರಿಸಲಾದ ಪ್ರಾಧಿಕಾರಗಳನ್ನು ಅವಗಾಹಿಸಿ ಎರಡೂ ಕಡೆಯ ಮಾನ್ಯ ವಕೀಲರು ಮಂಡಿಸಿದ ವಾದ–ಪ್ರತಿವಾದಗಳಿಗೆ, ನಾನು, ನನ್ನ ಎಚ್ಚರಿಕೆಯ ಪರಿಗಣನೆಯನ್ನು ನೀಡಿರುತ್ತೇನೆ.

17. ವಾದ–ಪ್ರತಿವಾದಗಳ ಹಿನ್ನೆಲೆಯಲ್ಲಿ ಈ ನ್ಯಾಯಾಲಯದ ಪರಿಗಣನೆಗಾಗಿ ಈ ಮುಂದಿನ ವಿಷಯಗಳನ್ನು ಎತ್ತಲಾಗಿದೆ:

**i) ಆರೋಪಗಳನ್ನು ರೂಪಿಸುವ ಆದೇಶವು ವಾದಕಾಲೀನ ಆದೇಶವಾಗಿದೆಯೇ?**

**ii) ಹಾಗಿದ್ದರೆ, ದಂಡ ಪ್ರಕ್ರಿಯಾ ಸಂಹಿತೆಯ 397 (2)ನೇ ಪ್ರಕರಣದಲ್ಲಿ ಇರುವ ಪ್ರತಿಷೇಧವನ್ನು ದೃಷ್ಟಿಯಲ್ಲಿಟ್ಟುಕೊಂಡು ಪುನರ್ ಪರಿಶೀಲನಾ ಅರ್ಜಿಯು ಊರ್ಜಿತವಾದುದೆ?**

18. ಅರ್ಜಿದಾರನ ವಾದದ ಅಂತಿಮ ಆಸರೆ ಯಾವುದೆಂದರೆ, ***ವಿ.ಸಿ. ಶುಕ್ಲಾ***ರವರ ಪ್ರಕರಣದಲ್ಲಿರುವ ಅನುಪಾತವನ್ನು ಈ ಅರ್ಜಿಗಳ ಸಂಗತಿಗಳಿಗೆ ಅನ್ವಯಿಸಲಾಗುವುದಿಲ್ಲ. ಆದುದರಿಂದ ಲೋಕಾಯುಕ್ತರ ಮಾನ್ಯ ವಕೀಲರು ಸದರಿ ಆಧಾರವನ್ನು ಅಪಾರವಾಗಿ ಆಧರಿಸಿದ್ದಾರೆ. ಮೊದಲಿಗೆ, ***ವಿ.ಸಿ. ಶುಕ್ಲಾ***ರವರ ಪ್ರಕರಣದಲ್ಲಿ ತೀರ್ಪನ್ನು ಮಾನ್ಯ ನಾಲ್ಕು ಮಂದಿ ನ್ಯಾಯಾಧೀಶರುಗಳನ್ನು ಒಳಗೊಂಡಿರುವ ನ್ಯಾಯಪೀಠವು ನೀಡಿದೆ. ನ್ಯಾಯಾಲಯದ ಆದೇಶವು, ಮಾನ್ಯ ನ್ಯಾಯಮೂರ್ತಿ ಶ್ರೀ ಡಿ.ಎ. ದೇಸಾಯಿಯವರ (ಅಂದು ಅವರು ನ್ಯಾಯಾಧೀಶರಾಗಿದ್ದಾಗ) ಸಹಮತಿಯೊಂದಿಗೆ ಮಾನ್ಯ ನ್ಯಾಯಮೂರ್ತಿ ಎಸ್. ಮುರ್ತಾಜ್ ಫಜಲ್ ಅಲಿ ಅವರದೇ ಆದ ತೀರ್ಪಿನಂತೆ ಮತ್ತು ಮಾನ್ಯ

ನ್ಯಾಯಮೂರ್ತಿ ಶ್ರೀ ಎ.ಬಿ. ಸೇನ್‌ರವರ ಮುಖ್ಯ ತೀರ್ಪಿನ ಪ್ರಕಾರ ಇದೆ. ಸದರಿ ಪ್ರಕರಣವು, ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮ, 1947ರ 5(1) (2) ಮತ್ತು 5(2) ಪ್ರಕರಣದೊಂದಿಗೆ ಓದಲಾದ ಭಾರತ ದಂಡ ಸಂಹಿತೆಯ 120–ಬಿ ಪ್ರಕರಣದ ಮೇರೆಗೆ ಆರೋಪಗಳನ್ನು ರೂಪಿಸಲು ನಿರ್ದೇಶಿಸಿ ವಿಶೇಷ ನ್ಯಾಯಾಧೀಶರು ಹೊರಡಿಸಿದ ಆದೇಶದ ಪ್ರಶ್ನೆಯನ್ನು ಎತ್ತುತ್ತದೆ. ಈ ವಿಷಯವು ಸರ್ವೋಚ್ಚ ನ್ಯಾಯಾಲಯದ ಮುಂದೆ ಬಂದಾಗ ಅದು ಅಪೀಲಿನ ಊರ್ಜಿತತೆಗೆ ಸಂಬಂಧಪಟ್ಟಂತೆ ಅದರಲ್ಲಿನ ಎದುರುದಾರರುಗಳ ಪರವಾಗಿ ಸಾಲಿಸಿಟರ್ ಜನರಲ್ ಆಫ್ ಇಂಡಿಯಾರವರು ಎತ್ತಿದ ಪ್ರಾಥಮಿಕ ಆಕ್ಷೇಪಣೆಗೆ ಸಂಬಂಧಿಸಿದ್ದು, ಗಣನೀಯ ಪ್ರಶ್ನೆಯನ್ನು ಪರಿಗಣಿಸಲು ವಿಸ್ತೃತ ಪೀಠಕ್ಕೆ ಕಳುಹಿಸಲಾಗಿತ್ತು.

19. ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸದರಿ ತೀರ್ಪಿನಲ್ಲಿ ಕೆಲವು ಪ್ರಾಧಿಕಾರಗಳು ನಿಘಂಟುಗಳು ಮತ್ತು ಸಮಗ್ರ ಕಾನೂನು ಸಂಗ್ರಹವನ್ನು ಪರಿಗಣಿಸಿತ್ತು; ಈ ಮುಂದಿನಂತೆ ಅದನ್ನು ಸಂಕ್ಷಿಪ್ತಗೊಳಿಸಲಾಗಿದೆ:

> *"24, ಪುನಃ ಪರಿಶೀಲಿಸಲು, ವಾದಕಾಲೀನ ಆದೇಶದ ಅಗತ್ಯ ಲಕ್ಷಣಗಳೇನೆಂದರೆ, ದಾವೆಯ ಪ್ರಗತಿಗೆ ಅಗತ್ಯವಾದ ಅಥವಾ ವಿವಾದಾಂಶಕ್ಕೆ ಪೂರಕವಾದ ಕೆಲವು ಅಂಶ ಅಥವಾ ವಿಷಯವನ್ನು ಮಾತ್ರ ನಿರ್ಧರಿಸುತ್ತದೆಯೇ ಹೊರತು ವಿವಾದದಲ್ಲಿನ ವಿಷಯ ಅಂತಿಮ ತೀರ್ಮಾನ ಅಥವಾ ತೀರ್ಪನ್ನಲ್ಲ, ಮಧ್ಯವರ್ತಿ ಆದೇಶವನ್ನು ಕ್ರಮವು ಪ್ರಾರಂಭವಾದ ಮತ್ತು ಮಧು ಲಿಮಾಯೆ –ವಿರುದ್ಧ– ಮಹಾರಾಷ್ಟ್ರ ರಾಜ್ಯ [(1977) 4 ಎಸ್‌ಸಿಸಿ 551: 1978 ಎಸ್‌ಸಿಸಿ (ಕ್ರಿಮಿನಲ್) 10: (1978) 1 ಎಸ್‌ಸಿಆರ್ 749]ರ ಪ್ರಕರಣದಲ್ಲಿ ಉಂಟಾವಾಲಿಯಾ ತೀರ್ಪು ಬರುವುದರ ನಡುವೆ ರೂಪಿಸಲಾಗಿದ್ದು, ಇದು, ಆರೋಪ ರೂಪಿಸುವ ಆದೇಶವು ವಾದಕಾಲೀನ ಆದೇಶವಾಗಿರುವುದಿಲ್ಲ. ಆದರೆ ಇದು ಕಾರ್ಪಸ್ ಜೂರಿಸ್ ಸೆಕಂಡ್ರಮ್‌ನ 60ನೇ ಸಂಪುಟದಲ್ಲಿ ಮೇಲೆ ಉದ್ಧೃತಗೊಳಿಸಲಾದ ಭಾಗದಲ್ಲಿ ಪರಿಭಾಷಿಸಲಾದಂಥ ಮಧ್ಯಂತರ ಆದೇಶವಾಗಿದೆ. ಕಾರ್ಪಸ್ ಜೂರಿಸ್*

*ಸೆಕಂಡ್ರಮ್ ನಲ್ಲಿ ನೀಡಲಾದ ಅಭಿಪ್ರಾಯೋಕ್ತಿಗಳೊಂದಿಗಿನ ಸಂಪೂರ್ಣ ಒಪ್ಪಂದದಲ್ಲಿ ನಮ್ಮನ್ನು ನಾವು ಕಂಡುಕೊಂಡಿದ್ದೇವೆ. ಮಧ್ಯವರ್ತಿ ಆದೇಶವಾಗಿದ್ದು ಆರೋಪ ರೂಪಿಸುವ ಆದೇಶವು, ಅಧಿನಿಯುಮದ 11(1) ನೇ ಪ್ರಕರಣದಲ್ಲಿ ಬಳಸಲಾದಂಥ 'ವಾದಕಾಲೀನ ಆದೇಶ' ಪದ ಸಾಮಾನ್ಯ ಮತ್ತು ಸ್ವಾಭಾವಿಕ ಅರ್ಥವ್ಯಾಪ್ತಿಯೊಳಗೆ ಸಾಮಾನ್ಯವಾಗಿ ಬರುತ್ತದೆಯೆಂಬುದು ಸ್ಪಷ್ಟವಾಗುತ್ತದೆ. ವಾರ್ಟ್‌ಸನ್‌ರವರ ಲಾ ಲೆಕ್ಸಿಕನ್ (14ನೇ ಆವೃತ್ತಿ ಪುಟ 529) ವಾದಕಾಲೀನ ಆದೇಶವನ್ನು ಹೀಗೆ ಅರ್ಥೈಸುತ್ತದೆ:*

*ವಾದಕಾಲೀನ ಆದೇಶ ಅಥವಾ ತೀರ್ಪು, ಕ್ರಿಯೆಯು ಪ್ರಗತಿಯಲ್ಲಿರುವ ಅವಧಿಯಲ್ಲಿ ರೂಪಿಸಿದುದು ಅಥವಾ ನೀಡಿದುದಾಗಿರುತ್ತದೆ. ಆದರೆ ಇದು ಪಕ್ಷಕಾರರ ಹಕ್ಕುಗಳನ್ನು ಅಂತಿಮವಾಗಿ ವಿಲೆ ಮಾಡಿರುವುದಿಲ್ಲ."*

*(ಒತ್ತು ನೀಡಲಾಗಿದೆ)*

20. ***ಮಧು ಲಿಮಾಯೆ*** ಪ್ರಕರಣದಲ್ಲಿ "ಮಧ್ಯಂತರ ಆದೇಶ"ವೆಂದು 'ಆರೋಪ ರೂಪಿಸುವುದಕ್ಕೆ' ನೀಡಲಾದ ಪರಿಭಾಷೆಯನ್ನು ಗಮನಿಸಿದ ನಂತರ ಮಾನ್ಯ ನ್ಯಾಯಾಧೀಶರು, ಅಂಥ ಆದೇಶವು, 'ವಾದಕಾಲೀನ ಆದೇಶ'ದ ಸಾಮಾನ್ಯ ಮತ್ತು ಸಹಜ ಅರ್ಥವ್ಯಾಪ್ತಿಯೊಳಗೆ ನೇರವಾಗಿ, ಬರುತ್ತದೆಯೆಂಬುದು ರೂಢಿಯೆಂಬುದು ಇದಕ್ಕೆ ಸಂಬಂಧಪಡುತ್ತದೆ.

21. ***ಎಸ್. ಕುಪ್ಪುಸ್ವಾಮಿ ರಾವ್ -ವಿರುದ್ಧ- ಕಿಂಗ್***[17], ***ಮಹಮದ್ ಅಮಿನ್ ಬ್ರದರ್ಸ್ ಲಿಮಿಟೆಡ್ ಮತ್ತು ಇತರರು -ವಿರುದ್ಧ- ದ ಡೊಮಿನಿಯನ್ ಆಫ್ ಇಂಡಿಯಾ ಮತ್ತು ಇತರರು***[18], ಪ್ರಕರಣಗಳಲ್ಲಿ ತೀರ್ಪುಗಳನ್ನು ಪರಿಗಣಿಸಿದ ನಂತರ, ಐದು

17. 1947 1 ಎಫ್‌ಸಿಆರ್ 180 [ಎ.ಐ.ಆರ್. (36) 1949 ಫೆಡರಲ್ ನ್ಯಾಯಾಲಯ 1
18. ಎಐಆರ್ 1950 ಎಫ್‌ಸಿ 77 [ಎಐಆರ್ (37) 1950 ಫೆಡರಲ್ ನ್ಯಾಯಾಲಯ 77

ಪ್ರಸ್ತಾವಗಳನ್ನು ಊಹಿಸಲಾಗಿದೆ. ಸದರಿ ಪ್ರಸ್ತಾವಗಳನ್ನು ಅನ್ವಯಿಸಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಮತ್ತೆ ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ:

> *"35. ಪ್ರಶ್ನಿತ ಆದೇಶಕ್ಕೆ ಈ ಪರೀಕ್ಷೆಗಳನ್ನು ಅನ್ವಯಿಸಿ, ನಾವು, ಇದು ವ್ಯವಹರಣೆಗಳನ್ನು ಕೊನೆಗೊಳಿಸುವುದಿಲ್ಲವಾದ್ದರಿಂದ, ಆರೋಪ ರೂಪಿಸುವ ಆದೇಶವು ಸಂಪೂರ್ಣವಾಗಿ ವಾದಕಾಲೀನ ಆದೇಶವಾಗಿರುತ್ತದೆ. ಆದರೆ ಖುಲಾಸೆಯಲ್ಲಿ ಅಥವಾ ಅಪರಾಧ ನಿರ್ಣಯದಲ್ಲಿ ಇದನ್ನು ಮುಕ್ತಾಯಗೊಳಿಸುವವರೆಗೆ ಅಧಿವಿಚಾರಣೆ ಮುಂದುವರಿಯುತ್ತದೆಯೆಂಬುದನ್ನು ಗುರುತಿಸಿದ್ದೇವೆ. ವಿಶೇಷ ನ್ಯಾಯಾಲಯವು, ಆರೋಪಗಳನ್ನು ರೂಪಿಸಲು ಮತ್ತು ಆಪಾದಿತನನ್ನು ಬಿಡುಗಡೆಗೊಳಿಸಲು ನಿರಾಕರಿಸಿದ್ದರೆ, ವ್ಯವಹರಣೆಗಳನ್ನು ಮುಕ್ತಾಯ ಗೊಳಿಸಬಹುದಾಗಿರುತ್ತದೆ. ಆದರೆ, ಅದು ಒಂದು ಕಡೆಯ ಚಿತ್ರಣ ಮಾತ್ರ ಆಗುತ್ತದೆ. ಮತ್ತೊಂದು ಕಡೆಯ ಚಿತ್ರಣ ಯಾವುದೆಂದರೆ, ವಿಶೇಷ ನ್ಯಾಯಾಲಯವು ಆಪಾದಿತನನ್ನು ಬಿಡುಗಡೆಗೊಳಿಸಲು ಮತ್ತು ಅವನ ವಿರುದ್ಧ ಆರೋಪಗಳನ್ನು ರೂಪಿಸಲು ನಿರಾಕರಿಸಿದರೆ ಆಗ ಆದೇಶವು ವಾದಕಾಲೀನ ಆಗಿರುತ್ತಿತ್ತು. ಏಕೆಂದರೆ ಅಧಿವಿಚಾರಣೆಯು ಇನ್ನೂ ಜೀವಂತವಾಗಿರುತ್ತದೆ".*
>
> (ಒತ್ತು ನೀಡಲಾಗಿದೆ)

22\. ಅಂತಿಮವಾಗಿ ಈ ಮುಂದಿನಂತೆ ಅಭಿಪ್ರಾಯಪಡಲಾಗಿದೆ:–

> *"47. ಹೀಗಾಗಿ, ಸಂಪೂರ್ಣ ಸ್ಥಿತಿಯನ್ನು ಸಂಕ್ಷಿಪ್ತವಾಗಿ ಹೇಳುವ ಮೂಲಕ ನಾವು ತಲುಪಿರುವೆವು ಎನ್ನುವ ಅನಿವಾರ್ಯ ನಿರ್ಣಯ ಎಂದರೆ, ಮೇಲೆ ಚರ್ಚಿಸಲಾದಂತೆ ವಿಧಿಸಲಾದ ಪರೀಕ್ಷೆಗಳ ಪ್ರಕಾರ ಅದರ ಸಹಜ ಅರ್ಥವ್ಯಾಪ್ತಿಯೊಳಗೆ 'ವಾದಕಾಲೀನ ಆದೇಶ'*

*ಪದಾವಳಿಯನ್ನು ನೀಡುವುದು, ನಿರ್ದಿಷ್ಟವಾಗಿ, ಕುಪ್ಪುಸ್ವಾಮಿ ಪ್ರಕರಣ [1947 ಎಫ್‌ಸಿಆರ್ 180: ಎಐಆರ್ 1949 ಎಫ್‌ಸಿ 1: 49 ಸಿಆರ್‌ಐ ಎಲ್‌ಜೆ 625] ಪ್ರಕರಣದಲ್ಲಿ, ಏನೇ ಇದ್ದರೂ ಎಂಬ ಖಂಡವನ್ನು ಅನ್ವಯಿಸಿ, ನಾವು, ಅಧಿನಿಯಮದ 11(1)ನೇ ಪ್ರಕರಣದಲ್ಲಿ ಕಂಡುಬರುವ 'ವಾದಕಾಲೀನ ಆದೇಶ' ಎಂಬ ಪದಾವಳಿಗೆ ಸಂಬಂಧಪಡುವಷ್ಟರಮಟ್ಟಿಗೆ, ಇದನ್ನು ಸಹಜ ಜ್ಞಾನದಲ್ಲಿ ಬಳಸಿದ್ದು, ವಿಶೇಷ ಅಥವಾ 397(2)ನೇ ಪ್ರಕರಣದಲ್ಲಿ ಸಂಹಿತೆಯು ಬಳಸಲಾದಂಥ ವಿಶೇಷ ಅಥವಾ ವ್ಯಾಪಕ ಅರ್ಥದಲ್ಲಿ ಬಳಸಿರುವುದಿಲ್ಲವೆಂಬುದನ್ನು ಮನಗಂಡಿದ್ದೇವೆ."*

*xxxxxxxx*

*(ಒತ್ತು ನೀಡಲಾಗಿದೆ)*

23. ಅರ್ಜಿದಾರರ ವಾದಗಳು, ಅಮರನಾಥ್ ಮತ್ತು ಮಧು ಲಿಮಾಯೆ ಪ್ರಕರಣಗಳಲ್ಲಿನ ಪ್ರಮಾಣಗಳನ್ನು ಒಳಗೊಂಡಿವೆಯೆಂದು ಅರ್ಜಿದಾರರ ಪರವಾಗಿ ವಾದಿಸಲಾಗಿತ್ತು. ಮತ್ತೊಂದು ಕಡೆ, ಲೋಕಾಯುಕ್ತದ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು. ಸದರಿ ಎರಡು ಪ್ರಕರಣಗಳಲ್ಲಿ, ಆರೋಪ ರೂಪಿಸುವುದು ಮುಖ್ಯ ವಿವಾದವಲ್ಲ ಎಂದು ವಾದಿಸಿದ್ದಾರೆ. ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮುಂದೆ ಬಂದಿರುವ ಸದರಿ ಎರಡು ಪ್ರಕರಣಗಳ ಮಾದರಿಯಲ್ಲಿ ***ವಿ.ಸಿ. ಶುಕ್ಲಾ*** ಪ್ರಕರಣದಲ್ಲಿ ಮಾನ್ಯ ನ್ಯಾಯಮೂರ್ತಿ ಡಿ.ಎ. ದೇಸಾಯಿಯವರ (ಅಂದು ಮಾನ್ಯ ನ್ಯಾಯಾಧೀಶರಾಗಿದ್ದಾಗ) ತೀರ್ಪಿನ ಸಹಮತಿಯಲ್ಲಿ ವಿವರಿಸಲಾಗಿದೆ. ಅದನ್ನು ಈ ಮುಂದಿನಂತೆ (ಎಸ್‌ಸಿಸಿ ಪುಟ 145ರಲ್ಲಿ) ಓದಲಾಗಿದೆ:

*"100. ಅಮರ್‌ನಾಥ್ –ವಿರುದ್ಧ– ಹರಿಯಾಣ ರಾಜ್ಯ [(1977) 4 ಎಸ್‌ಸಿಸಿ 137: 1977 ಎಸ್‌ಸಿಸಿ (ಸಿಆರ್‌ಐ) 585:1978) 1 ಎಸ್‌ಸಿಆರ್ 222] ಪ್ರಕರಣದಲ್ಲಿ, ಕ್ರಿಮಿನಲ್ ದಂಡ ಸಂಹಿತೆಯ (ಸಂಕ್ಷಿಪ್ತತೆಗಾಗಿ 'ಸಂಹಿತೆ') 482 ಮತ್ತು 397ನೇ ಪ್ರಕರಣಗಳ*

*ಮೇರೆಗೆ ಆಪಾದಿತನು ಸಲ್ಲಿಸಿದ ಅರ್ಜಿಯನ್ನು ರದ್ದುಗೊಳಿಸಲು ಉಚ್ಚ ನ್ಯಾಯಾಲಯವು ನಿರಾಕರಿಸಿರುವ ದೂರುದಾರನು ಸಲ್ಲಿಸಿದ ದೂರಿನ ಮೇಲೆ ಸಮನುಗಳನ್ನು ಹೊರಡಿಸುವ ದಂಡಾಧಿಕಾರಿಯವರ ಆದೇಶದ ವಿರುದ್ಧ ಈ ನ್ಯಾಯಾಲಯದ ಮುಂದೆ ವಿಷಯವು ಬಂದಿರುತ್ತದೆ.*

XXX

*104. ಮಧು ಲಿಮಾಯೆ –ವಿರುದ್ಧ– ಮಹಾರಾಷ್ಟ್ರ ರಾಜ್ಯ [(1977 4 ಎಸ್‌ಸಿಸಿ 551: 1978 ಎಸ್‌ಸಿಸಿ (ಸಿಆರ್‌ಐ) 10: (1978)1 ಎಸ್‌ಸಿಆರ್ 749] ಪ್ರಕರಣದಲ್ಲಿ, ನ್ಯಾಯಾಲಯದ ಅಧಿಕಾರವ್ಯಾಪ್ತಿಯನ್ನು ಪ್ರಶ್ನಿಸುವ ಆದೇಶವು, ಮಧ್ಯಂತರ ಆದೇಶವಾಗಿದೆಯೇ 397ನೇ ಪ್ರಕರಣದ ಮೇರೆಗೆ ಉಚ್ಚ ನ್ಯಾಯಾಲಯದ ಪುನರ್ ಪರಿಶೀಲನೆಯ ಅಧಿಕಾರವ್ಯಾಪ್ತಿಗೆ ಒಳಪಡುವುದಿಲ್ಲವೇ ಎಂಬ ಪ್ರಶ್ನೆಗೆ ಸಂಬಂಧಪಡುತ್ತದೆ. ಈ ಪ್ರಕರಣದಲ್ಲಿ ನ್ಯಾಯಾಲಯದ ಮುಂದೆ ಪ್ರಶ್ನಿಸಲಾದ ಆದೇಶ ಯಾವುದು ಎಂಬ ಕೆಲವು ವಿವಾದವಿದೆ – – – –*

*ಅಷ್ಟೇ ಅಲ್ಲದೆ ಈ ಮುಂದಿನಂತೆ ಅಭಿಪ್ರಾಯಪಡಲಾಗಿದೆ:*

*ಆದುದರಿಂದ, ಮಧು ಲಿಮಾಯೆ –ವಿರುದ್ಧ– ಮಹಾರಾಷ್ಟ್ರ ರಾಜ್ಯ [(1977 4 ಎಸ್‌ಸಿಸಿ 551: 1978 ಎಸ್‌ಸಿಸಿ (ಸಿಆರ್‌ಐ) 10: (1978)1 ಎಸ್‌ಸಿಆರ್ 749] ಪ್ರಕರಣದಲ್ಲಿನ ನಿರ್ಣಯವು, ಆರೋಪ ರೂಪಿಸುವುದು, ವಾದಕಾಲೀನ ಆದೇಶವಾಗಿರುವುದಿಲ್ಲ. ಆದರೆ, ಇದು ವಾದಕಾಲೀನ ಆದೇಶದ ಪರಿಧಿಯೊಳಗೆ ಬರದಿರುವುದರಿಂದ ಇದು ಮಧ್ಯಂತರ ಆದೇಶವಾಗುತ್ತದೆಯೆಂಬ ಪ್ರಸ್ತಾವಕ್ಕೆ ಸಂಬಂಧಿಸಿದ ಅಧಿಕಾರವಾಗಿದೆ ಎಂದು ವಾದಿಸಿರುವುದು*

> *ಸರಿಯಾದುದಲ್ಲ. ಆರೋಪವನ್ನು ರೂಪಿಸುವುದಕ್ಕೆ ಯಾವುದೇ ಆಕ್ಷೇಪಣೆಯಿಲ್ಲ, ಆದರೆ, ದೂರನ್ನು ಪುರಸ್ಕರಿಸುವುದಕ್ಕೆ ನ್ಯಾಯಾಲಯದ ಅಧಿಕಾರವ್ಯಾಪ್ತಿಗೆ ಆಕ್ಷೇಪವಿದೆ".*
>
> *(ಒತ್ತು ನೀಡಲಾಗಿದೆ)*

24. ಆದುದರಿಂದ, ಲೋಕಾಯುಕ್ತರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು, ಆರೋಪಗಳನ್ನು ರೂಪಿಸುವುದು, ***ಅಮರ್‌ನಾಥ್*** ಮತ್ತು ***ಮಧು ಲಿಮಾಯೆ*** ಪ್ರಕರಣದಲ್ಲಿನ ಪರಿಗಣನೆಯ ಅಡಿಯಲ್ಲಿ ಒಂದು ವಿವಾದವೇ ಅಲ್ಲ ಎಂಬ ಅವರ ನಿವೇದನೆಯು ಸರಿಯಾಗಿದೆ. ಮಾನ್ಯ ಸರ್ವೋಚ್ಚ ನ್ಯಾಯಾಲಯದ ***ವಿ.ಸಿ. ಶುಕ್ಲಾ*** ಪ್ರಕರಣದಲ್ಲಿನ ಪ್ರಮುಖ ತೀರ್ಪಿನಲ್ಲಿ, ವಾದಕಾಲೀನ ಆದೇಶದ ಸ್ವರೂಪಕ್ಕೆ ಅನ್ವಿಸುವಷ್ಟರಮಟ್ಟಿಗೆ "locus classics" ಎಂದು ಅಭಿಪ್ರಾಯಪಟ್ಟಿದ್ದು, ಇದು ***ಕುಪ್ಪುಸ್ವಾಮಿರಾವ್ – ವಿರುದ್ಧ– ಕಿಂಗ್*** ಆಗಿದೆ. ಸರ್ವೋಚ್ಚ ನ್ಯಾಯಾಲಯವು, ಖಚಿತವಾಗಿ ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ: (ಎಸ್‌ಪಿಸಿ ಪಿ 149)

> *"30 – – – – – ಹೀಗಾಗಿ, ಅಂತಿಮ ಆದೇಶದ ಆನುಷಂಗಿಕತೆಯು, ಇದು ಸಿವಿಲ್ ಪ್ರಕರಣವಾಗಿದೆಯೇ ಅಥವಾ ಕ್ರಿಮಿನಲ್ ಪ್ರಕರಣವಾಗಿದೆಯೇ ಎಂಬುದನ್ನು ಸೂಕ್ತವಾಗಿ ಗುರುತಿಸಲಾಗಿದ್ದು, ಇಂಗ್ಲೀಷ್ ನ್ಯಾಯಾಧೀಶರು ನೀಡಿದ ವ್ಯಾಖ್ಯೆಯು ಎರಡಕ್ಕೂ ಅನ್ವಯವಾಗುತ್ತದೆಯೆಂಬುದನ್ನು ಇದು ಗುರುತಿಸಿತ್ತು. ಈ ಪ್ರಕರಣವನ್ನು **ಎಸ್. ಕುಪ್ಪುಸ್ವಾಮಿರಾವ್ –ವಿರುದ್ಧ– ಕಿಂಗ್** ಪ್ರಕರಣದಲ್ಲಿ ಗಮನಿಸಲಾಗಿದ್ದು, ಇದು, ನಮ್ಮ ಅಭಿಪ್ರಾಯದಲ್ಲಿ, ವಿಷಯಕ್ಕೆ ಸಂಬಂಧಿಸಿದ ಪ್ರಮುಖ ಪ್ರಕರಣವಾಗಿದೆ. ಅಥವಾ, ನಾವು ಹಾಗೆ ಹೇಳುವುದಾದರೆ, ಇದು ವಾದಕಾಲೀನ ಆದೇಶದ ಸ್ವರೂಪಕ್ಕೆ ಸಂಬಂಧಪಡುವಷ್ಟರಮಟ್ಟಿಗೆ ಇದು locus classics ಆಗಿದೆ".*
>
> XXXXXXXX
>
> (ಒತ್ತು ನೀಡಲಾಗಿದೆ)

25. ***ಕುಪ್ಪುಸ್ವಾಮಿ*** ಮತ್ತು ***ಮಹಮದ್ ಅಮ್ಮಿನಸ್*** ರವರ ಪ್ರಕರಣದ ಸಂಬಂಧದಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಸದರಿ ಎರಡು ಅಧಿಕಾರ ಮಿತಿಗಳನ್ನು ರದ್ದುಗೊಳಿಸಿದರೆ ಅಥವಾ ಬಿಟ್ಟರೆ ಈ ಮುಂದಿನಂತೆ ಅಭಿಪ್ರಾಯಪಡುವುದನ್ನು ಪರಿಗಣಿಸಿದೆ: (ಎಸ್‌ಸಿಸಿ ಪಿ 149)

> ***"106 – – – – ಪ್ರತಿಯೊಂದು ವಾದಕಾಲೀನ ಆದೇಶವು ಸಂಗತಿಯನ್ನು ವಿಲೆ ಮಾಡುವುದಕ್ಕೆ ಮಾತ್ರ ಕಾರಣವಾಗಿದ್ದು, ತತ್ಕಾಲದಲ್ಲಿರುವ ಪಕ್ಷಕಾರನಿಗೆ ವ್ಯತಿರಿಕ್ತವಾಗಿ ಬಾಧಕವಾಗಿದ್ದರೂ ಕೂಡ ಇತ್ಯರ್ಥದಲ್ಲಿರುವ ವ್ಯವಹರಣೆಯ ಕ್ರಮದಲ್ಲಿ ಮಹತ್ವದ ಸಂಗತಿ ಇರುವುದಿಲ್ಲ. ವಾದಕಾಲೀನವಾಗಿರುವುದನ್ನು ಹೊರತುಪಡಿಸಿದರೆ ಬೇರೇನೂ ಇರುವುದಿಲ್ಲ".***
>
> ***(ಒತ್ತು ನೀಡಲಾಗಿದೆ)***

26. ಹೀಗಾಗಿ ಮೇಲ್ಕಂಡ ಎಚ್ಚರಿಕೆಯ ವಿಶ್ಲೇಷಣೆಯು, ಈ ಮುಂದಿನ ನಿಸ್ಸಂದಿಗ್ಧ ಊಹೆಗಳಿಗೆ ಕಾರಣವಾಗುತ್ತದೆ:

> i) ಅಮರ್‌ನಾಥ್ ಪ್ರಕರಣದಲ್ಲಿ, ಪರಿಗಣನೆಯಲ್ಲಿರುವ ವಿವಾದಾಂಶ ಸಮನುಗಳನ್ನು ಹೊರಡಿಸುವ ಮಾನ್ಯ ದಂಡಾಧಿಕಾರಿಯವರು ಹೊರಡಿಸಿದ ಆದೇಶವಾಗಿತ್ತು;
>
> ii) ಮಧು ಲಿಮಾಯೆ ಪ್ರಕರಣವು, ತಾನೇ ಆರೋಪ ರೂಪಿಸುವ ಪ್ರಸ್ತಾವದ ಅಧಿಕಾರ ಹೊಂದಿರುವುದಿಲ್ಲ. ವಾದಕಾಲೀನ ಆದೇಶವಾಗಿರುವುದಿಲ್ಲ;
>
> iii) ವಾದಕಾಲೀನ ಆದೇಶದ ಸ್ವರೂಪವು ಸಂಬಂಧಪಡುವಷ್ಟರಮಟ್ಟಿಗೆ, 'locus classics' ಆಗಿದ್ದು, ಇದು, ಕುಪ್ಪುಸ್ವಾಮಿರಾವ್ –ವಿರುದ್ಧ– ಕಿಂಗ್ ಪ್ರಕರಣದ್ದಾಗಿದೆ.

iv) ಕುಪ್ಪುಸ್ವಾಮಿ ಹಾಗೂ ಮಹಮದ್ ಅಮಿನ್ ಪ್ರಕರಣದಲ್ಲಿ ಗೊತ್ತುಪಡಿಸಲಾದ ಪರೀಕ್ಷೆಗಳನ್ನು ಬೇರ್ಪಡಿಸಲಾಗಿಲ್ಲ.

27. **ಕುಪ್ಪುಸ್ವಾಮಿ** ಪ್ರಕರಣದಲ್ಲಿ, ಈ ಮುಂದಿನಂತೆ ದಾಖಲಿಸಲಾಗಿದೆ:

> *"ಈ ಪ್ರಕರಣದಲ್ಲಿ ಉಚ್ಚ ನ್ಯಾಯಾಲಯದ ತೀರ್ಪು, ಡಿಕ್ರಿ ಅಥವಾ ಅಂತಿಮ ಆದೇಶದ ಅರ್ಥ ಏನು ಎಂಬುದು ಸದ್ಯದ ಪ್ರಶ್ನೆಯಾಗಿದ್ದು, 'ಅಂತಿಮ ಆದೇಶ' ಎಂಬ ಪದಾವಳಿಗೆ ನ್ಯಾಯಿಕವಾಗಿ ವ್ಯಾಖ್ಯಾನ ನೀಡಲಾಗಿದ್ದು ಅದರ ಅರ್ಥವು ಈಗ ಸುಸ್ಥಾಪಿತವಾಗಿದೆ. ಸಲಮಾನ್ –ವಿರುದ್ಧ– ವಾರ್ನರ್ [(1891) 1 ಕ್ಯೂ.ಬಿ. 734] ಪ್ರಕರಣದಲ್ಲಿ, ಲಾರ್ಡ್ ಈಷರ್ ಎಂ.ಇ. ಇವರು ಈ ಅರ್ಥದಲ್ಲಿ 'ಅಂತಿಮ ಆದೇಶ' ಎಂಬ ಪದಾವಳಿಯ ಅರ್ಥವನ್ನು ಚರ್ಚಿಸಿದ್ದಾರೆ:–*
>
> *'ಅವರ ನಿರ್ಣಯ, ಯಾವುದೇ ಮಾರ್ಗವನ್ನು ನೀಡಿದ್ದರೆ, ಅದು ತನ್ನ ಸ್ಥಾನ ಸ್ಥಾಪಿಸಿದರೆ, ಅಂತಿಮವಾಗಿ ವಿವಾದದಲ್ಲಿ ವಿಷಯವು ವಿಲೆಯಾಗುತ್ತದೆ, ಈ ನಿಯಮಗಳ ಉದ್ದೇಶಕ್ಕಾಗಿ, ಇದು ಅಂತಿಮ ಎಂಬುದು ನನ್ನ ಆಲೋಚನೆ. ಮತ್ತೊಂದು ಕಡೆ, ಅವರ ನಿರ್ಣಯದಲ್ಲಿ ಅದನ್ನು ಒಂದು ಮಾರ್ಗದಲ್ಲಿ ನೀಡಿದರೆ, ಅಂತಿಮವಾಗಿ ವಿವಾದದಲ್ಲಿ ವಿಷಯ ವಿಲೆಯಾಗುತ್ತದೆ. ಆದರೆ, ಮತ್ತೊಂದು ರೀತಿಯಲ್ಲಿ ನೀಡಿದರೆ, ಮುಂದುವರಿಯುವ ಕ್ರಮಕ್ಕೆ ಅವಕಾಶವಾಗುತ್ತದೆ. ಆಗ ನನ್ನ ಆಲೋಚನೆಯಂತೆ ಅದು ಅಂತಿಮವಾಗಿರುವುದಿಲ್ಲ ಆದರೆ ವಾದಕಾಲೀನವಾಗಿರುತ್ತದೆ.'*

28. ಹೀಗಾಗಿ, ಇದು ತುಂಬಾ ಪ್ರಮುಖವಾದುದಾಗಿದ್ದು, ಇದನ್ನು, **ಕುಪ್ಪುಸ್ವಾಮಿ**ಯ ಪ್ರಕರಣದಲ್ಲಿ ನಿಯಮಿಸಲಾದ ಪರೀಕ್ಷೆಯನ್ನು ಬೇರ್ಪಡಿಸದಿದ್ದರೆ

ಆಗ 'ಅಂತಿಮ ಆದೇಶ'ವಾಗಿ ಅದನ್ನೇ ಅರ್ಹಗೊಳಿಸುವ ಆದೇಶವನ್ನು ಲಾರ್ಡ್ ಈಷರ್‌ರವರ ಪರೀಕ್ಷೆಯಲ್ಲಿ ಹೊರಡಿಸಲೇಬೇಕು ಎಂದು ಒಮ್ಮೆ ಅಭಿಪ್ರಾಯಪಡಲಾಗಿದೆ. ಎಂದರೆ ಯಾವುದೇ ರೀತಿಯಲ್ಲಿ ನೀಡಿದ ನಿರ್ಣಯವನ್ನು ವ್ಯವಹರಣೆಗಳು ತೆಗೆದುಹಾಕುತ್ತವೆ. ನಮ್ಮ ಮುಂದಿರುವ ಅರ್ಜಿಯಲ್ಲಿ, ಬಿಡುಗಡೆಗೊಳಿಸಬೇಕೆನ್ನುವ ಅರ್ಜಿದಾರನ ಮನವಿಯನ್ನು ಪುರಸ್ಕರಿಸಿದರೆ, ಆಗ, ವ್ಯವಹರಣೆಗಳನ್ನು ಮುಕ್ತಾಯಗೊಳಿಸಿದಂತಾಗುತ್ತದೆ. ಆದರೆ ಅದರ ವಜಾವಣೆಯನ್ನು ಪ್ರಗತಿಯಲ್ಲಿರುವ ಅಧಿವಿಚಾರಣೆಗಳಲ್ಲಿ ಇಡಲಾಗಿದೆ. ಆದುದರಿಂದ, ಸದರಿ ಆದೇಶಗಳನ್ನು ಲಾರ್ಡ್ ಈಷರ್ಸ್ ಪರೀಕ್ಷೆಗೆ ಹೊರಡಿಸಬಾರದು. ***ಕರ್ನಾಟಕ ರಾಜ್ಯ –ವಿರುದ್ಧ– ಎಲ್. ಮುನಿಸ್ವಾಮಿ***[19] ಹಾಗೂ ***ಸೆಂಚುರಿ ಸ್ಪಿನ್ನಿಂಗ್ ಅಂಡ್ ಮ್ಯಾನುಫ್ಯಾಕ್ಚರಿಂಗ್ ಕಂಪನಿ ಲಿಮಿಟೆಡ್ –ವಿರುದ್ಧ– ಮಹಾರಾಷ್ಟ್ರ ರಾಜ್ಯ***[20] ಪ್ರಕರಣಗಳಲ್ಲಿನ ಇತರ ಅಧಿಕಾರಗಳನ್ನು ಪರಿಗಣಿಸಿದ ನಂತರ ಇದು ಆರೋಪ ರೂಪಿಸುವ ಆದೇಶವು ಹೀಗೆ ಅಭಿಪ್ರಾಯಪಡುವ ಮೂಲಕ ವಾದಕಾಲೀನ ಆದೇಶವು, ವಾದಕಾಲೀನ ಆದೇಶವು ಪ್ರಶ್ನಾತೀತವಾದುದೆಂದು ಅಭಿಪ್ರಾಯಪಟ್ಟಿತ್ತು; (ಎಸ್‌ಸಿಸಿ ಪುಟ 151)

> *"111. – – – – – – ತದನಂತರದ ತೀರ್ಮಾನಗಳ ಅನುಪಾತವನ್ನು ಅನ್ವಯಿಸಿದ ನಂತರವೂ ಆರೋಪ ರೂಪಿಸುವ ಆದೇಶವು, ವಾದಕಾಲೀನ ಆದೇಶವನ್ನು ಹೊರತುಪಡಿಸಿದ ಆದೇಶವಾಗಿರುವುದಿಲ್ಲ. ವಾದಕಾಲೀನ ಆದೇಶವು ಪ್ರಶ್ನಾತೀತವಾದುದು ಎಂಬುದಾಗಿದೆ".*
>
> *(ಒತ್ತು ನೀಡಲಾಗಿದೆ)*

19. (1977)2 ಎಸ್‌ಸಿಸಿ 699: 1977 ಎಸ್‌ಸಿಸಿ (ಕ್ರಿಮಿನಲ್) 404:1977)3 ಎಸ್‌ಸಿಆರ್ 113
20. (1972) 3 ಎಸ್‌ಸಿಸಿ 282:1972 ಎಸ್‌ಸಿಸಿ (ಕ್ರಿ) 495: ಎಐಆರ್ 1972 ಎಸ್‌ಸಿ 545

29. ***ವಿ.ಸಿ. ಶುಕ್ಲಾ***ರವರ ಪ್ರಕರಣದಲ್ಲಿನ ಅನುಪಾತವು, ಬಂಧನಕಾರಿಯಾಗಿರುವುದಿಲ್ಲ, ಇದರಿಂದ ಸದರಿ ಪ್ರಕರಣ ಏನೇ ಇದ್ದರೂ ಎಂಬ ಖಂಡ ಒಳಗೊಂಡಿರುವ ವಿಶೇಷ ನ್ಯಾಯಾಲಯಗಳ ಅಡಿಯಲ್ಲಿ ಬಂದಿದ್ದು, ನ್ಯಾಯಾಲಯದಲ್ಲಿ ಉಚ್ಚ ನ್ಯಾಯಾಲಯದ ಉಪವೇಶನ ನ್ಯಾಯಾಧೀಶರು ಅಧ್ಯಕ್ಷತೆ ವಹಿಸಿರುತ್ತಾರೆ. ಆರೋಪ ರೂಪಿಸುವ ಆದೇಶವು ವಾದಕಾಲೀನ ಆದೇಶವಾಗಿದೆಯೇ ಅಥವಾ ಅಂತಿಮ ಆದೇಶವಾಗಿದೆಯೇ ಎನ್ನುವ ತತ್ವಗಳಲ್ಲಿ ಒಂದಾಗಿದ್ದು, ಅದನ್ನು, ಲಾರ್ಡ್ ಈಷರ್‌ನ ಪರೀಕ್ಷೆಯಲ್ಲಿ ಉತ್ತೀರ್ಣವಾಗುತ್ತದೆಯೇ ಎಂಬುದನ್ನು ನೇರವಾಗಿ ಆಧರಿಸಿದೆ. ಆದುದರಿಂದ, ಸದರಿ ವಾದವು ಅಪರೂಪವಾಗಿ ಸಂಬಂಧಪಡುತ್ತದೆ. ಆದರೆ, ಭ್ರಷ್ಟಾಚಾರ ನಿಯಂತ್ರಣ ಅಧಿನಿಯಮದ 19(3)ನೇ ಪ್ರಕರಣವು, ವಿಶೇಷ ನ್ಯಾಯಾಲಯಗಳ ಅಧಿನಿಯಮ, 1979ರ ಪ್ರಕರಣದಲ್ಲಿರುವಂತೆ ಏನೇ ಇದ್ದರೂ ಎಂಬ ಖಂಡವನ್ನು ಒಳಗೊಂಡಿದೆಯೆಂಬುದನ್ನು ದಾಖಲಿಸಲು ಇದಿಷ್ಟು ಸಾಕಾಗುತ್ತದೆ.

30. ಈ ಹಂತದಲ್ಲಿ, ಭ್ರಷ್ಟಾಚಾರ ನಿಯಂತ್ರಣ ಅಧಿನಿಯಮದ ಮೇರೆಗೆ ಅರ್ಜಿಗಳನ್ನು ಸಮರ್ಥಿಸುವುದಕ್ಕೆ ಸಂಬಂಧಪಟ್ಟಂಥ ಪ್ರಸ್ತುತ ವಿವಾದಾಂಶವನ್ನು, ಪರಿಗಣನೆಗಾಗಿ, ***ಅನುರ್ ಕುಮಾರ್ ಜೈನ್ –ವಿರುದ್ಧ– ಸಿಬಿಐ***[21] ಪ್ರಕರಣದಲ್ಲಿ ಮತ್ತು ಹಲವು ಸಂಬಂಧಿತ ಪ್ರಕರಣಗಳಲ್ಲಿ (ಖಚಿತವಾಗಿ 37 ಪ್ರಕರಣಗಳು) ಮಾನ್ಯ ದೆಹಲಿ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠದ ಮುಂದಿರಿಸಲಾಗಿದೆಯೆಂಬುದನ್ನು ಗಮನಿಸುವುದು ಪ್ರಯೋಜನಕ್ಕೆ ಬರಬಹುದು. ***ಮಧು ಲಿಮಾಯೆ*** ಮತ್ತು ***ಕೆ.ಕೆ. ಪಟೇಲ್*** ರವರ ಪ್ರಕರಣಗಳಲ್ಲಿನ ತೀರ್ಪುಗಳನ್ನೂ ಒಳಗೊಂಡಂತೆ ವಿವಿಧ ಪ್ರಮಾಣಗಳನ್ನು ಪರಿಗಣಿಸಿದ ನಂತರ ಭ್ರಷ್ಟಾಚಾರ ನಿಯಂತ್ರಣ ಅಧಿನಿಯಮ, 1988ರ ಮೇರೆಗೆ ಆರೋಪ ರೂಪಿಸುವ ಆದೇಶವು, ವಾದಕಾಲೀನ ಆದೇಶವಾಗಿದೆಯೆಂದು ಅಭಿಪ್ರಾಯಪಡುವ ಮೂಲಕ ಉಲ್ಲೇಖಕ್ಕೆ ಉತ್ತರ ನೀಡಲಾಗಿತ್ತು.

21. 2011 ಎಸ್‌ಸಿಸಿ ಆನ್‌ಲೈನ್ ಡೆಲ್ 1574

31. ***ಕೆ.ಕೆ. ಪಟೇಲ***ರ ಪ್ರಕರಣದಲ್ಲಿ ಲಾರ್ಡ್ ಈಷರ್‌ರ ಪರೀಕ್ಷೆಯನ್ನು ಅನ್ವಯಿಸಲಾಗಿಲ್ಲ. ***ಭಾಸ್ಕರ್ ಇಂಡಸ್ಟ್ರೀಸ್ ಲಿಮಿಟೆಡ್*** ಪ್ರಕರಣದಲ್ಲಿ, ಇದು ವಾದಕಾಲೀನವಾಗಿತ್ತೇ ಎಂಬ ಆದೇಶದ ಸ್ವರೂಪಕ್ಕೆ ಸಂಬಂಧಿಸಿದ ಅಪೀಲಿನಲ್ಲಿ ಮೊದಲ ಬಾರಿಗೆ ವಿವಾದವನ್ನು ಇದರಲ್ಲಿ ಎತ್ತಲು ಅಪೀಲುದಾರನಿಗೆ ಅನುಮತಿ ನೀಡಲಾಗಿರುವುದಿಲ್ಲವೆಂದು ಅಭಿಪ್ರಾಯಪಡಲಾಗಿದೆ. ಇತರ ಸಾಕ್ಷ್ಯಾಧಾರವಿಲ್ಲದಿದ್ದಲ್ಲಿ, ಇದರಲ್ಲಿ ಪ್ರಶ್ನಿತ ಆದೇಶವು, ವಾದಕಾಲೀನ ಆದೇಶವಾಗಿತ್ತೇ ಎಂಬುದನ್ನು ನಿರ್ಧರಿಸುವುದು ಕಷ್ಟಕರವಾದುದಾಗಿದೆ. ***ವಿವೇಕ್ ಗುಪ್ತಾ*** ಪ್ರಕರಣದಲ್ಲಿ, ಪರಿಗಣನೆಯಲ್ಲಿರುವ ಪ್ರಧಾನ ಪ್ರಶ್ನೆ, ಅಪೀಲುದಾರನನ್ನು ಆರೋಪ ಮಾಡಬಹುದೇ ಹಾಗೂ ಭ್ರಷ್ಟಾಚಾರ ನಿಯಂತ್ರಣ ಅಧಿನಿಯಮ, 1988ರ ಉಪಬಂಧಗಳ ಮೇರೆಗೆ ವಿಶೇಷ ನ್ಯಾಯಾಧೀಶರು ಇತರ ಇಬ್ಬರು ಆಪಾದಿತರನ್ನು ಒಟ್ಟಿಗೆ ಅಧಿವಿಚಾರಣೆ ಮಾಡಬಹುದಾಗಿದೆಯೇ ಎಂಬುದಾಗಿದೆ. ***ಹರ್‍ಯಾಣ ಲ್ಯಾಂಪ್*** ಪ್ರಕರಣದಲ್ಲಿ, ಪೊಲೀಸು ವರದಿಯ ಆಧಾರದ ಮೇಲಿನ ಬಿಡುಗಡೆ ಆದೇಶವು, ***ಅಮರ್‌ನಾಥ್*** ಮತ್ತು ***ಮಧು ಲಿಮಾಯೆ*** ಪ್ರಕರಣಗಳಲ್ಲಿನ ತೀರ್ಪುಗಳನ್ನು ಆಧರಿಸಿ ವಾದಕಾಲೀನ ಆದೇಶವಾಗಿರುವುದಿಲ್ಲವೆಂದು ಅಭಿಪ್ರಾಯಪಡಲಾಗಿದೆ. ***ರಾಜೇಂದ್ರ ಕುಮಾರ್*** ಪ್ರಕರಣದಲ್ಲಿ, ಒಳಗೊಂಡ ವಿವಾದವು ಪ್ರಕ್ರಿಯೆಯನ್ನು ಹೊರಡಿಸಲು ನಿರ್ದೇಶಿಸುವ ಆದೇಶವು, ವಾದಕಾಲೀನ ಆದೇಶವಾಗಿರುತ್ತದೆಯೇ ಎಂಬುದಾಗಿತ್ತು. ಪೂನಂಚಾಂದ್ ಪ್ರಕರಣದಲ್ಲಿ, ಪ್ರಕ್ರಿಯೆಯನ್ನು ಹೊರಡಿಸುವ ಸೂಚಿಸುವ ಆದೇಶದ ಕಾನೂನುಸಮ್ಮತತೆಯನ್ನು ಪರಿಗಣಿಸಲು ವಿಷಯವನ್ನು ಹಿಂದಕ್ಕೆ ಕಳುಹಿಸಲಾಗಿತ್ತು. ಹೀಗಾಗಿ, ***ವಿ.ಸಿ. ಶುಕ್ಲಾ*** ಪ್ರಕರಣದಲ್ಲಿ ವಿಸ್ತೃತ ಪೀಠದ ತೀರ್ಪಿಗೆ ಪ್ರತಿರೋಧ ಒಡ್ಡಿರುವ ಎಲ್ಲಾ ಉದ್ಧರಣ ಭಾಗಗಳನ್ನು ಕಟ್ಟಕಡೆಯ ಗೌರವಗಳೊಂದಿಗೆ ಬದ್ಧಗೊಳಿಸಲಾಗಿರುವುದಿಲ್ಲ. (ಸೋಮವಂತಿ –ವಿರುದ್ಧ– ಪಂಜಾಬ್ ರಾಜ್ಯ, ಎಐಆರ್ 1963 ಎಸ್‌ಸಿ 151).

32. ಪರಿಗಣನೆಗಾಗಿ ಉಳಿದಿರುವ ನಿವೇದನೆಗಳು, ಪೂರ್ವ ನಿರ್ಣಯಾನುಸಾರದ ಸಿದ್ಧಾಂತಕ್ಕೆ ಸಂಬಂಧಪಟ್ಟಿರುತ್ತವೆ. ಈ ಪುನರ್ ಪರಿಶೀಲನಾ ಅರ್ಜಿಯನ್ನು

***ಎ.ಸಿ. ಕಾಮಾಕ್ಷಿ ಅಮರ್‌ನಾಥ್ ಕುಮಾರ್*** ಹಾಗೂ ***ಕಟ್ಟಾ ಸುಬ್ರಹ್ಮಣ್ಯ ನಾಯ್ಡು*** ಪ್ರಕರಣಗಳಲ್ಲಿ ಸಮರ್ಥಿಸಲಾಗಿದೆಯೆನ್ನುವ ದೃಷ್ಟಿಯನ್ನು ತೆಗೆದುಕೊಂಡಿರುವ ಈ ನ್ಯಾಯಾಲಯವು, ಇದನ್ನೇ ನಿರ್ವಹಿಸಬಹುದು ಎಂದು ಶ್ರೀ ಬಿ.ವಿ. ಆಚಾರ್ಯರವರು ವಾದಿಸಿದ್ದರು. ***ಪಂಚಾಕ್ಷರಿ ಸಿದ್ರಾಮಪ್ಪ ಯೆಲಿಗಾರ್ –ವಿರುದ್ಧ– ಶಿಗ್ಗಾನ್ ತಾಲೂಕ್ ಶಿಕ್ಷಣ ಸಮಿತಿ ಹಾಗೂ ಇತರರು***[22], ಪ್ರಕರಣದಲ್ಲಿ ಈ ನ್ಯಾಯಾಲಯದ ತೀರ್ಪನ್ನು ಆಧರಿಸಿರುವ ಲೋಕಾಯುಕ್ತದ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು, ***ಕೆ.ಕೆ. ಪಟೇಲ್ ಭಾಸ್ಕರ್ ಇಂಡಸ್ಟ್ರೀಸ್ ಮತ್ತು ಇತರರು*** ಪ್ರಕರಣಗಳ ತೀರ್ಪುಗಳನ್ನು ಅಜಾಗರೂಕತೆಯಿಂದ ಪರಿಗಣಿಸಲಾಗಿದೆಯೆಂದು ವಾದಿಸಿದ್ದಾರೆ. ಅಷ್ಟೇ ಅಲ್ಲದೆ ಅವರು, ***ಪಿ.ವಿ. ಅಮರ್‌ನಾಥ್ ಪ್ರಸಾದ್*** ಪ್ರಕರಣದಲ್ಲಿ ಈ ನ್ಯಾಯಾಲಯವು ***ವಿ.ಸಿ. ಶುಕ್ಲಾ***ರವರ ಪ್ರಕರಣವನ್ನು ಸ್ವಲ್ಪ ಪ್ರಮಾಣದ ದೃಷ್ಟಿಯನ್ನು ಅವಲಂಬಿಸಿದೆಯೆಂದು ವಾದಿಸುವಲ್ಲಿ ಸರಿಯಾದ ಹಾದಿಯಲ್ಲಿದ್ದಾರೆ. ಅವರು, ***ಕಟ್ಟಾ ಸುಬ್ರಮಣ್ಯ ನಾಯ್ಡು***ರವರ ಪ್ರಕರಣದಲ್ಲಿ ಈ ನ್ಯಾಯಾಲಯವು ಅವಲಂಬಿಸಿದ ***ಜರ್ನೇಲ್ ಸಿಂಗ್ –ವಿರುದ್ಧ– ರಾಜಸ್ಥಾನ ರಾಜ್ಯ*** ಪ್ರಕರಣದಲ್ಲಿನ ಪ್ರಮಾಣವನ್ನು ಮಾನ್ಯ ರಾಜಸ್ಥಾನ ಉಚ್ಚ ನ್ಯಾಯಾಲಯವು ಬಿಡುಗಡೆ ಮಾಡಿತ್ತು ಸರ್ವೋಚ್ಚ ನ್ಯಾಯಾಲಯವು ಮಾಡಿರಲಿಲ್ಲ. ***ಎ.ಸಿ. ಕಾಮಾಕ್ಷಿ ವಿ.ಸಿ. ಶುಕ್ಲಾ***ರವರ ತೀರ್ಪಿನ ಪ್ರಕರಣದಲ್ಲಿ ಉದ್ಧರಿಸಿಲ್ಲ.

33. ತೀರ್ಪುಗಳ ಬದ್ಧತಾ ಸ್ವರೂಪವನ್ನು, ಮಾನ್ಯ ಸರ್ವೋಚ್ಚ ನ್ಯಾಯಾಲಯವು, ***ಉತ್ತರ ಪ್ರದೇಶ ರಾಜ್ಯ –ವಿರುದ್ಧ– ಸಿಂಥೆಟಿಕ್ಸ್ ಹಾಗೂ ಕೆಮಿಕಲ್ಸ್ ಲಿಮಿಟೆಡ್***[23], ಪ್ರಕರಣದಲ್ಲಿ ವಿವರಿಸಲಾಗಿದ್ದು ಅದನ್ನು ಈ ಮುಂದಿನಂತೆ ಓದಲಾಗಿದೆ:

> *"40 – – – – – 'precedents sub silentio and without argument are of no moment'* ಎಂದು ಪೀಠವು

22. ಐಎಲ್‌ಆರ್ 1998 ಕೆಎಆರ್ 3748
23. (1991) 4 ಎಸ್‌ಸಿಸಿ 139

*ಅಭಿಪ್ರಾಯಪಟ್ಟಿದೆ. ಹೀಗಾಗಿ ನ್ಯಾಯಾಲಯಗಳು ನ್ಯಾಯಸಮ್ಮತವಲ್ಲದ ಪೂರ್ವ ನಿದರ್ಶನಗಳ ಮೂಲಕ ನ್ಯಾಯವಲ್ಲದ ಅಪರಾಧ ಮಾಡಲಾಗಿರುವ ಕೃತ್ಯದಿಂದ ಪಡೆದುಕೊಳ್ಳುವ ಸಂಬಂಧ ಈ ತತ್ವಕ್ಕೆ ಮೂಲವನ್ನು ತೆಗೆದುಕೊಂಡಿದೆ. ವ್ಯಕ್ತಪಡಿಸಲಾಗದ ಒಂದು ನಿರ್ಣಯ ಹಾಗೂ ಕಾರಣಗಳನ್ನು ನೀಡಲಾಗದ ಅಥವಾ ವಿವಾದಾಂಶದಲ್ಲಿ ಅಭಿಪ್ರಾಯವನ್ನು ತಿಳಿಸಲಾಗದ ವಿಷಯವನ್ನು 141ನೇ ಅನುಚ್ಛೇದವು ಉದ್ದೇಶಿಸಲಾದಂತೆ ಪರಿಣಾಮಕಾರಿಯಾಗಿ ಬದ್ಧವಾಗಿರುವುದೆಂದು ಘೋಷಿಸಲಾದ ಕಾನೂನಾಗಿದೆಯೆಂದು ಭಾವಿಸಲು ಸಾಧ್ಯವಿಲ್ಲ".*

*(ಒತ್ತು ನೀಡಲಾಗಿದೆ)*

34. ಆದುದರಿಂದ, ಮೇಲಿನ ***ವಿ.ಸಿ.ಶುಕ್ಲಾ*** ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟಿರುವಂತೆ ಪ್ರಕರಣಗಳ ಎರಡೂ ಪ್ರವರ್ಗಗಳಲ್ಲಿ ಆರೋಪ ರೂಪಿಸುವ ಆದೇಶವು, ವಾದಕಾಲೀನ ಆದೇಶವಾಗಿರುತ್ತದೆಯೆನ್ನುವ ತಪ್ಪಿಸಿಕೊಳ್ಳಲಾಗದ ನಿರ್ಣಯಕ್ಕೆ ಮೇಲಿನ ಚರ್ಚೆ ಬಂದು ನಿಲ್ಲುತ್ತದೆ. ಸದರಿ ತೀರ್ಪನ್ನು ಬೃಹತ್ ಪೀಠವು ನೀಡಿದ್ದು, ಹೀಗಾಗಿ ಬದ್ಧತೆಯುಳ್ಳದ್ದಾಗಿದೆ. ಫಲಿತಾಂಶವಾಗಿ ಪುನರ್ ಪರಿಶೀಲನಾ ಅರ್ಜಿಯು ದಂಡ ಪ್ರಕ್ರಿಯಾ ಸಂಹಿತೆಯ 397ನೇ ಪ್ರಕರಣದ (2)ನೇ ಉಪ-ಪ್ರಕರಣದಲ್ಲಿ ಒಳಗೊಂಡಿರುವ ವ್ಯಕ್ತ ಪ್ರತಿಷೇಧದ ದೃಷ್ಟಿಯಿಂದ ಊರ್ಜಿತವಾಗುವುದಿಲ್ಲ. ಪರಿಗಣನೆಗಾಗಿ ರೂಪಿಸಲಾದ ಅಂಶಗಳಿಗೆ ತದನುಸಾರವಾಗಿ ಉತ್ತರಿಸಲಾಗಿದೆ.

35. ಈ ಮೊಕದ್ದಮೆಗಳಿಂದ ವಿರಮಿಸುವ ಮೊದಲು, ಈ ಪ್ರಕರಣಗಳನ್ನು ನಿರ್ಧರಿಸುವಲ್ಲಿ ಮಾನ್ಯ ವಕೀಲರು ಹಾಗೂ ಹಿರಿಯ ನ್ಯಾಯವಾದಿಗಳು ನೀಡಿದ ನೆರವನ್ನು ವಿವೇಚನೆಗಾಗಿ ದಾಖಲೆಯಲ್ಲಿಡಲಾಗಿದೆ.

36. ಫಲಿತಾಂಶವಾಗಿ ಈ ಮುಂದಿನ ಆದೇಶ:

**ಆದೇಶ**

ಪುನರ್ ಪರಿಶೀಲನಾ ಅರ್ಜಿಗಳು ಊರ್ಜಿತಯೋಗ್ಯವಾಗದಿರುವುದರಿಂದ ವಜಾಗೊಳಿಸಲಾಗಿದೆ.